Test Booklet No.
परीक्षा पुस्तिका संख्या

18922

This booklet contains 20 pages.
इस पुस्तिका में 20 पृष्ठ हैं ।

# JBC – 12A

**PAPER I / प्रश्न-पत्र I**

**PART IV & V / भाग IV & V**

**Kannada Language Supplement**

**कन्नड़ भाषा परिशिष्ट**

Test Booklet Code
परीक्षा पुस्तिका संकेत

**F**

**Do not open this Test Booklet until you are asked to do so.**

**इस परीक्षा पुस्तिका को तब तक न खोलें जब तक कहा न जाए ।**

**Read carefully the Instructions on the Back Cover (Page 19 & 20) of this Test Booklet.**

**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें ।**

**For instructions in Kannada see Page 2 of this booklet. / कन्नड़ में निर्देशों के लिए इस पुस्तिका का पृष्ठ 2 देखें ।**

## *INSTRUCTIONS FOR CANDIDATES*

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Parts I, II, III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Blue / Black Ball Point Pen only** for writing particulars on this page / marking responses in the Answer Sheet.
5. The CODE for this Language Booklet is **F**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part IV : Language I – (Kannada) *(Q. 91 to Q. 120)*
   Part V : Language II – (Kannada) *(Q. 121 to Q. 150)*
7. Part IV contains 30 questions for Language I and Part V contains 30 questions for Language II. In this Test Booklet, only questions pertaining to Kannada language have been given. **In case the language/s you have opted for as Language I and/or Language II is a language other than Kannada, please ask for a Test Booklet that contains questions on that language. The languages being answered must tally with the languages opted for in your Application Form.**
8. **Candidates are required to attempt questions in Part V (Language II) in a language other than the one chosen as Language I (in Part IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

## *परीक्षार्थियों के लिए निर्देश*

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं** ।
2. परीक्षार्थी भाग I, II, III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से ।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं । भाषा परिशिष्टों को आप अलग से माँग सकते हैं ।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल नीले/काले बॉल पॉइंट पेन** का प्रयोग करें ।
5. इस भाषा पुस्तिका का **संकेत** है **F**. यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ-2** एवं मुख्य प्रश्न पुस्तिका पर छपे संकेत से मिलता है । अगर यह भिन्न हो तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग IV : भाषा I — (कन्नड़) *(प्र. 91 से प्र. 120)*
   भाग V : भाषा II — (कन्नड़) *(प्र. 121 से प्र. 150)*
7. भाग IV में भाषा I के लिए 30 प्रश्न और भाग V में भाषा II के लिए 30 प्रश्न दिए गए हैं । इस परीक्षा पुस्तिका में केवल कन्नड़ भाषा से संबंधित प्रश्न दिए गए हैं । **यदि भाषा I और/या भाषा II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए । जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिएँ।**
8. **परीक्षार्थी भाग V (भाषा II) के लिए, भाषा सूची से ऐसी भाषा चुनें जो उनके द्वारा भाषा I (भाग IV) में चुनी गई भाषा से भिन्न हो ।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें ।
10. सभी उत्तर केवल OMR उत्तर पत्र पर ही अंकित करें । अपने उत्तर ध्यानपूर्वक अंकित करें । उत्तर बदलने हेतु श्वेत रंजक का प्रयोग निषिद्ध है ।

SEAL

Name of the Candidate (in Capitals) : ______________________
परीक्षार्थी का नाम (बड़े अक्षरों में ) :

Roll Number (अनुक्रमांक) : in figures (अंकों में) ______________________

: in words (शब्दों में) ______________________

Centre of Examination (in Capitals) : ______________________
परीक्षा केन्द्र (बड़े अक्षरों में ) :

Candidate's Signature : ______________ Invigilator's Signature : ______________
परीक्षार्थी के हस्ताक्षर : निरीक्षक के हस्ताक्षर :

Facsimile signature stamp of Centre Superintendent ______________________

ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.

# JBC–12A

ಪ್ರಶ್ನೆ ಪುಸ್ತಿಕೆ ಸಂಕೇತ

**F**

## ಪ್ರಶ್ನೆ ಪತ್ರಿಕೆ I

## ಭಾಗ IV & V

## ಕನ್ನಡ ಭಾಷಾ ಪೂರಕ

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 & 20) ಗಮನವಿಟ್ಟು ಓದಿರಿ.**

***ಪರೀಕ್ಷಾರ್ಥಿಗಳಿಗೆ ಸೂಚನೆಗಳು :***

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು. ಇದು ಭಾಗ IV (ಭಾಷೆ I) ಅಥವಾ ಭಾಗ V (ಭಾಷೆ II) ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II, III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ ನೀಲಿ/ಕಪ್ಪು **ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **F** ಆಗಿದೆ. ಉತ್ತರ ಪತ್ರಿಕೆಯ **ಪುಟ-2** ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆ ಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳು ಇವೆ IV ಮತ್ತೂ V, ಇದರಲ್ಲಿ **60** ವಸ್ತುನಿಷ್ಟ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ :
   ಭಾಗ IV : ಭಾಷೆ I — (ಕನ್ನಡ) (ಪ್ರಶ್ನೆ 91 ರಿಂದ 120)
   ಭಾಗ V : ಭಾಷೆ II — (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ IV ರಲ್ಲಿ ಭಾಷೆ I ಗಾಗಿ 30 ಪ್ರಶ್ನೆಗಳು ಮತ್ತು ಭಾಗ V ರಲ್ಲಿ ಭಾಷೆ II ಗಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ I ಮತ್ತು/ಅಥವಾ II ರಲ್ಲಿ ನೀವು ಆಯ್ಕೆಮಾಡಿದ ಭಾಷೆಗಳು - ಕನ್ನಡ ಅಲ್ಲದೇ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. ಪರೀಕ್ಷಾರ್ಥಿ ಭಾಗ V (ಭಾಷೆ II) ಕ್ಕಾಗಿ, ಭಾಷೆ I (ಭಾಗ IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ OMR ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) ______________________

ಕ್ರಮಸಂಖ್ಯೆ : (ಅಂಕೆಗಳಲ್ಲಿ) ______________________

: (ಅಕ್ಷರಗಳಲ್ಲಿ) ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) ______________________

ಪರೀಕ್ಷಾರ್ಥಿಯ ಸಹಿ ______________ ನಿರೀಕ್ಷಕರ ಸಹಿ ______________

Facsimile signature stamp of
Centre Superintendent ______________________

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ-I** ನ್ನಾಗಿ ಆಯ್ಕೆಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು. →

# ಭಾಗ IV
## ಭಾಷೆ I
## ಕನ್ನಡ

*ನಿರ್ದೇಶನಗಳು : ಕೆಳಗೆ ಕೊಟ್ಟಿರುವ ಕವನವನ್ನು ಓದಿ, ಆದರ ಮುಂದೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರ.ಸಂ. 91 ರಿಂದ 96) ಅತ್ಯಂತ ಸೂಕ್ತವಾದವುಗಳನ್ನು ಆರಿಸಿ ಉತ್ತರಿಸಿ.*

ಕವಿತೆ ಹುಟ್ಟುವುದು ಮಹಲಿನಲ್ಲಲ್ಲ,
ಮುರುಕು ಜೋಪಡಿಗಳಲ್ಲಿ.
ಕವಿತೆ ಹುಟ್ಟುವುದು ಝುಗಝುಗಿಸುವ
ದೀಪಗಳ ಬೆಳಕೆನಲ್ಲಲ್ಲ ಬುಡ್ಡಿ -
ಬೆಳಕಿನ ಮಿಡುಕಿನಲ್ಲಿ.

ಕವಿತೆ ಹುಟ್ಟುವುದು ಕಲ್ಪನೆಯ ಮೂಸೆಯಲ್ಲಲ್ಲ
ದೈನಂದಿನ ಘಟನಾವಳಿಗಳಲ್ಲಿ.
ಕವಿತೆ ಹುಟ್ಟುವುದು ತುಂತುರು ಮಳೆಯಲ್ಲಲ್ಲ
ನೊಂದವರ ಕಣ್ಣೀರಿನಲ್ಲಿ.

ಕವಿತೆ ಹುಟ್ಟುವುದು ಬಿಗಿದ ಕೊರಳಿನಲ್ಲಿ,
ನಿರಾಶೆಯ ನೆರಳಿನಲ್ಲಿ, ಆಸಹಾಯಕರ ಆಕ್ರಂದನದಲ್ಲಿ.
ಇವೆಲ್ಲ, ಅಲ್ಲಿ ಇಲ್ಲಿ ಹೆಕ್ಕಿ ಪಟ್ಟಿ ಮಾಡಿದ
ನುಡಿಮುತ್ತುಗಳು. ಹೋದಲ್ಲೆಲ್ಲ ಹಿಂಬಾಲಿಸಿ
ಕಾಡುವ ಮಾತಿನ ಭೂತಗಳು.

91. ಮನಸ್ಸಿನಲ್ಲಿ ಕವಿತೆ ಒಡಮೂಡಲು ಆವಶ್ಯಕವಾದುದು
   (1) ಭಾವನೆಗಳ ತಾಕಲಾಟದಲ್ಲಿ
   (2) ನೋವಿನ ಆಳದಲ್ಲಿ
   (3) ಅನುಭವದಲ್ಲಿ
   (4) ಮೇಲಿನ ಎಲ್ಲವೂ ಒಟ್ಟುಗೂಡಿದಾಗ

92. 'ಕವಿತೆ' – ಎಂದರೆ
   (1) ಅಲ್ಲಿ ಇಲ್ಲಿ ಹೆಕ್ಕಿ ಪಟ್ಟಿ ಮಾಡಿದ ನುಡಿಮುತ್ತುಗಳು
   (2) ತುಂತುರು ಮಳೆಯಲ್ಲಿ ಹುಟ್ಟುವುದು
   (3) ಗುಡಿಸಿಲಿನಲ್ಲಿ ಹುಟ್ಟುವುದು
   (4) ಮಹಡಿ ಮನೆಗಳಲ್ಲಿ ಹುಟ್ಟುವುದು

93. 'ಕವಿತೆ ಹುಟ್ಟುವುದು ಬಿಗಿದ ಕೊರಳಿನಲ್ಲಿ' – ಎಂಬ ಸಾಲಿನಲ್ಲಿ ಬರುವ "ಬಿಗಿದ ಕೊರಳು" – ಎಂದರೆ
   (1) ಆಭರಣ ಭಾರವಾಗಿ ಬಿಗಿತಗೊಂಡದ್ದು
   (2) ಬಟ್ಟೆ ಬಿಗಿದ ಕುತ್ತಿಗೆ
   (3) ದುಃಖದಿಂದ ಆಳು ಉಮ್ಮಳಿಸಿದಾಗ
   (4) ಮೇಲಿನ ಯಾವುದೂ ಅಲ್ಲ

94. ಕೆಳಗಿನವುಗಳಲ್ಲಿ ವಿಧ್ಯರ್ಥಕ ರೂಪ ಗುರುತಿಸಿ
   (1) ಝುಗಝುಗಿಸುವ
   (2) ಕಲ್ಪನೆಯ ಮೂಸೆಯಲ್ಲಲ್ಲ
   (3) ಕವಿತೆ ಹುಟ್ಟುವುದು ಆಸಹಾಯಕ ಆಕ್ರಂದನದಲ್ಲಿ
   (4) ಹೋದಲ್ಲೆಲ್ಲ ಹಿಂಬಾಲಿಸುವುದೇ

95. ಇದರಲ್ಲಿ ಅನುಕರಣ ವಾಚಕ ಗುರುತಿಸಿ
   (1) ದೈನಂದಿನ
   (2) ಮಾತಿನ ಭೂತ
   (3) ಝುಗಝುಗ
   (4) ತುಂತುರು

96. ಈ ಕವಿತೆ ಹೇಳಲು ಹೊರಟಿರುವುದು
   (1) ಮಾತಿನ ಭೂತಗಳು ಕಾಡುತ್ತವೆ
   (2) ಸುಖ-ದುಃಖ ಎರಡೂ ಜೀವನಕ್ಕೆ ಬೇಕು
   (3) 'ನೋವು', ಕಷ್ಟ, ದುಃಖ, ಪರಿಶ್ರಮ, ನುಡಿಮುತ್ತು - ಜೀವನವನ್ನು ಮಾಗಿಸುತ್ತದೆ
   (4) ಶ್ರೀಮಂತಿಕೆಯಲ್ಲಿ ಅನುಭವವಿರುವುದಿಲ್ಲ

*ನಿರ್ದೇಶನಗಳು : ಕೆಳಗೆ ಕೊಟ್ಟಿರುವ ವಾಕ್ಯ ವೃಂದವನ್ನು ಓದಿ ಮುಂದೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರ.ಸಂ. 97 ರಿಂದ 105) ಅತ್ಯಂತ ಸೂಕ್ತವಾದವುಗಳನ್ನು ಆರಿಸಿ ಉತ್ತರಿಸಿ.*

ಹಕ್ಕಿಗಳ ಗೂಡು ಕಟ್ಟುವ ಚಾತುರ್ಯ ಅದ್ಭುತವಾದುದು. ಹಲವು ಪಕ್ಷಿಗಳು ಹಲವು ರೀತಿಯ ಗೂಡುಗಳನ್ನು ತಮ್ಮ ಉಪಯೋಗಕ್ಕೆ ಸಿದ್ಧಗೊಳಿಸಿಕೊಳ್ಳುತ್ತವೆ. ಇದರಲ್ಲಿ ಅವುಗಳು ತಮ್ಮದೇ ಆದ ತಾಂತ್ರಿಕತೆಯನ್ನು ತೋರಿಸಿರುತ್ತವೆ. ಮರದಲ್ಲಿ ಸಣ್ಣ ಪೊಟರೆಯಿಂದ ಮೊದಲಾಗಿ ಅತ್ಯಂತ ಸಂಕೀರ್ಣ ರೀತಿಯ ಗೂಡುಗಳನ್ನು ಇಲ್ಲಿ ಕಾಣಬಹುದು. ಮನುಷ್ಯನಿಗೆ ಮನೆ

ಕಟ್ಟುವುದು ಅವನ ಜೀವಮಾನದ ಗುರಿಯಾದರೆ ಈ ಬಾನಾಡಿಗಳಿಗೆ ಅದು ಅದರ ಜೀವನವಿಡೀ ನಡೆಯವಂತಹದ್ದು.

ಇವುಗಳ ತಾಂತ್ರಿಕ ಕೌಶಲ್ಯದ ಬಗ್ಗೆ ಹೇಳುವುದಾದರೆ ಅದರಲ್ಲಿ ಅಪ್ರತಿಮವೆನ್ನಬಹುದಾದುದು 'ಗೀಜಗನ ಗೂಡುಗಳು' ಇವುಗಳನ್ನು ಸಾಮಾನ್ಯವಾಗಿ ವೀವರ ಬರ್ಡ್ (ನೇಕಾರ ಹಕ್ಕಿ) ಎಂದು ಕರೆಯುತ್ತಾರೆ. ಅದಲ್ಲದೇ ಇತರ ನಾಮಧೇಯಗಳೆಂದರೆ ಟೈಲರ್ ಹಕ್ಕಿಗಳು ಅಥವಾ ಫಿನ್ಸ್ (ಹಾಡು ಹಕ್ಕಿಗಳು) ಎಂದೂ ಹೇಳಬಹುದು. ಇದು ಪ್ಲಾಸೆಡಿ ಗುಂಪಿಗೆ ಸೇರಿದವು. ಬಹುಪಾಲು ನಗರ, ಪಟ್ಟಣ ಪ್ರದೇಶಗಳಲ್ಲಿ ಕಾಣಬರುವ ಸಾಮಾನ್ಯ ಗುಬ್ಬಚ್ಚಿಗಳೂ ಸಹ ಇದೇ ಜಾತಿಗೆ ಸೇರಿದವಾಗಿರುತ್ತವೆ. ಇವು ಸುಮಾರು ಎಂಟರಿಂದ ಹತ್ತು ಅಂಗುಲಗಳಷ್ಟು ಉದ್ದವಿರುತ್ತವೆ.

ಈ ನೇಕಾರ ಹಕ್ಕಿಗಳು (ಗೀಜಗ) ಅದೇ ಹೆಸರಿನಿಂದ ಹೆಚ್ಚಾಗಿ ಕರೆಯಲು ಪ್ರಮುಖ ಕಾರಣವೆಂದರೆ ಅವು ಹೆಣೆಯುವ ಅತ್ಯಂತ ಕ್ಲಿಷ್ಟವಾದ್ದ ತಾಂತ್ರಿಕತೆಯುಳ್ಳ ಗೂಡುಗಳು. ಸಾಮಾನ್ಯ ದೊಡ್ಡ ಮರಗಳ ರೆಂಬೆಗಳಿಗೆ ತಲೆ ಕೆಳಗಾದ ಶಂಕುವಿನ ಆಕೃತಿಯ ಗೂಡುಗಳಿಗೆ ಇದೇ ಸೃಷ್ಟಿಕರ್ತ. ಅದರ ಮುಖ್ಯ ಉದ್ದೇಶ ಸಂತತಿ ಬೆಳೆಸುವದಾಗಿದೆ ಮತ್ತು ಅದಕ್ಕಾಗಿ ಹೆಣ್ಣು ಗೀಜಗಗಳನ್ನು ಆಕರ್ಷಿಸುವುದು. ಇದನ್ನು ನಿರ್ಮಿಸುವುದು ಗಂಡೇ ಎಂದು ಬೇರೆ ಹೇಳಬೇಕಾಗಿಲ್ಲ. ಇದಕ್ಕಾಗಿ ಸಾಕಷ್ಟು ರಕ್ಷಣೆಯುಳ್ಳ ಸ್ಥಳವನ್ನು ಇವು ಆಯ್ಕೆ ಮಾಡಿಕೊಳ್ಳುತ್ತವೆ. ಹಾಳುಭಾವಿಗಳ ಮೇಲೆ ಚಾಚಿಕೊಂಡಿರುವಂತಹ ಕೊಂಬೆಗಳು ಇದರ ಮೊದಲ ಆದ್ಯತೆ. ಜೊತೆಯಲ್ಲಿ ಈ ಕೊಂಬೆಗಳು ಗಟ್ಟಿತವನ್ನೂ ಸಹ ಅದನ್ನು ಎಳೆದು ನೇತಾಡಿ ಪರೀಕ್ಷೆ ಮಾಡಿಕೊಳ್ಳುತ್ತದೆ.

ಈ ರೀತಿಯ ವಿಶಿಷ್ಟ ಗೂಡುಗಳನ್ನು ಕಟ್ಟಲು ಗೀಜಗ ಹಕ್ಕಿಗಳು ಸಣ್ಣ ಸಣ್ಣ ಒಣಗಿದ ಮರದ ಎಲೆ. ಕೊಂಬೆ ಭತ್ತದ ಒಣಗಿದ ತೆನೆ ಇಂತಹ ವಸ್ತುಗಳನ್ನು ಆಯ್ಕೆ ಮಾಡಿಕೊಳ್ಳುತ್ತವೆ. ಇವುಗಳನ್ನು ಸೇರಿಸಿ ಒಬ್ಬ ಪರಿಣಿತ ಸಿಂಪಿಗನಂತೆಯೇ ಬಟ್ಟೆ ಹೊಲಿಯುವ ಚಾಕಚಕ್ಯತೆಯನ್ನು ಇವು ಹೊಂದಿವೆ. ಮೊದಲಿಗೆ ಮೊಟ್ಟೆಯಿಡುವ ಜಾಗ ನಿರ್ಮಿಸಿ ಅನಂತರ ಅದರ ಸುತ್ತಲೂ ಗೂಡನ್ನು ಹೆಣೆದುಕೊಳುತ್ತದೆ. ತನ್ನ ಚೂಪಾದ ಕೊಕ್ಕುಗಳನ್ನು ಉಪಯೋಗಿಸಿ ಹೆಣಿಗೆ ಹಾಕುತ್ತದೆ. ಇದರ ನಿರ್ಮಾಣದ ಚಾಣಾಕ್ಷತೆಯನ್ನು ಅದು ಹೆಣೆದಿರುವ ಬಲೆ ಮತ್ತು ಒಂದಕ್ಕೊಂದು ಬಿಗಿದಿರುವ ಗಂಟುಗಳಿಂದ ಗುರುತಿಸಬಹುದು. ಗೂಡಿನ ಮೇಲ್ಭಾಗವನ್ನು ದೊಡ್ಡ ಎಲೆಗಳ ಬಳಕೆ ಮಾಡಿ ಅದಕ್ಕೆ ತಾನು ಸ್ರವಿಸುವ ರಸದ ಲೇಪನದಿಂದ ಗಟ್ಟಿಗೊಳಿಸುವುದಲ್ಲದೇ ಅದು ಮೇಲ್ಛಾವಣಿಯಾಗಿ ಮಳೆಗಾಲದಲ್ಲಿ ಸೋರುವುದನ್ನೂ ತಡೆಯುತ್ತದೆ. ಈ ರೀತಿಯ ಗೂಡುಗಳು ತಲೆ ಕೆಳಗಾದ ಶಂಕುವಿನ ರೀತಿಯಲ್ಲಿದ್ದು ಅದರ ಕೆಳಭಾಗದಿಂದಲೇ ಹಕ್ಕಿಗಳಿಗೆ ಓಡಾಟ. ಇಂತಹ ಸುಂದರ ಸೌಧಗಳಿಗೆ ಇನ್ನಷ್ಟು ಮೆರುಗು ನೀಡಲು ಈ ವೀವರ್ ಹಕ್ಕಿಗಳು ದೀಪಾಲಂಕಾರ ಸಹ ಮಾಡಿಕೊಳ್ಳುತ್ತವೆ. ಇದಕ್ಕಾಗಿ ಇದು ಸಣ್ಣ ಮಿಣುಕು ಹುಳುಗಳನ್ನು ಹಿಡಿದು ತಂದು ತನ್ನ ಗೂಡಿನ ಒಳಗೋಡೆಗಳಿಗೆ ಅಂಟಿಸುತ್ತದೆ. ಇವುಗಳಿಗೆ ಇಲ್ಲೇ ತಮ್ಮ ಜೀವಮಾನವನ್ನು ಕಳೆಯುವ ಭಾಗ್ಯ.

ಗಂಡು ಗೀಜಗಗಳು ಗೂಡು ಕಟ್ಟುವ ಮುಖ್ಯ ಉದ್ದೇಶ ಹೆಣ್ಣುಗಳನ್ನು ಆಕರ್ಷಿಸುವುದು. ಒಂದು ವೇಳೆ ತಾನು ಆಯ್ದ ಹೆಣ್ಣಿಗೆ ಅದು ಇಷ್ಟವಾಗದಿದ್ದಲ್ಲಿ ಬೇರೆ ಪ್ರಿಯತಮೆಯನ್ನು ಕರೆ ತರುತ್ತದೆ.

ಈ ವೀವರ್ ಹಕ್ಕಿಗಳಲ್ಲಿ ಆಫ್ರಿಕಾದ ಸೋಶಿಯಲ್ ವೀವರ್ ಹಕ್ಕಿಗಳು ಬಹಳ ಪ್ರಮುಖವಾದವು. ಇದಕ್ಕೆ ಕಾರಣವೆಂದರೆ ಇವುಗಳು ಅತ್ಯಂತ ಸಂಕೀರ್ಣವಾದ ಬಹುಮಹಡಿ ಗೂಡುಗಳನ್ನು ನಿರ್ಮಿಸುವ ಚಾತುರ್ಯ ಹೊಂದಿರುತ್ತವೆ. ಇದನ್ನು ಆಫ್ರಿಕನ್ ಬಫೆಲೊ ಎಂಬುದಾಗಿಯೂ ಕರೆಯುತ್ತಾರೆ. ಇವು ಕಟ್ಟುವ ಗೂಡಿನಲ್ಲಿ 100 ರಿಂದ 300 ಸಂಸಾರಗಳು ಜೀವನ ಮಾಡಬಹುದು. ಪ್ರತಿ ಗೂಡು ಹತ್ತರಿಂದ ಹದಿನೈದು ಅಡಿ ಉದ್ದಗಲವಿದ್ದು ಅದರೊಳಗಿನ ಪ್ರತ್ಯೇಕ ಅಂಕಣಗಳು ಸುಮಾರು ಹತ್ತು ಅಂಗುಲ ಅಗಲವಿರುತ್ತದೆ. ಅನೇಕ ಪಕ್ಷಿ ವೀಕ್ಷಕರ ಅಭಿಪ್ರಾಯದಂತೆ ನೇಕಾರ ಹಕ್ಕಿಗಳ ಗೂಡುಗಳು ಹಲವಾರು ವರುಷಗಳು ಬಾಳಬಲ್ಲವು.

**97.** ಮನುಷ್ಯರು ಮತ್ತು ಪಕ್ಷಿಗಳು "ಗೂಡು" ಕಟ್ಟುವ ಪ್ರಮುಖ ಉದ್ದೇಶ

(1) ಸಂತಾನ

(2) ಕೌಶಲ್ಯತೆ ತೋರಿಸಲು

(3) ಆಶ್ರಯ

(4) ಪತ್ನಿ/ಹೆಣ್ಣು ಆಕರ್ಷಿಸಲು

**98.** ಗೀಜುಗ ಪಕ್ಷಿಗೆ ನೇಕಾರ ಹಕ್ಕಿಗಳೆಂದು ಕರೆಯಲು ಪ್ರಮುಖ ಕಾರಣ

(1) ಇವು ಹೆಣೆಯುವ ಅತ್ಯಂತ ಕ್ಲಿಷ್ಟವಾದ, ತಾಂತ್ರಿಕತೆಯುಳ್ಳ ಗೂಡುಗಳು

(2) ಇವು ಬೇಸರಿಸದೇ ಮತ್ತೆ ಮತ್ತೆ ಗೂಡು ಕಟ್ಟುವುದು

(3) ಇವು ಆಯ್ಕೆ ಮಾಡುವ ಜಾಗ-ಸ್ಥಳ

(4) ಶಂಕುವಿನಾಕೃತಿಯಲ್ಲಿ ಗೂಡು ನೇಯುವುದು

**99.** ಗೀಜುಗ ಪಕ್ಷಿಯ ನಿರ್ಮಾಣದ ಚಾಕಚಕ್ಯತೆಯನ್ನು ಹೀಗೆ ಗುರುತಿಸಬಹುದು

(1) ದೀಪಾಲಂಕಾರ ನೋಡುವುದರಿಂದ

(2) ಹೆಣೆದಿರುವ ಬಲೆ ಮತ್ತು ಒಂದಕ್ಕೊಂದು ಬಿಗಿದಿರುವ ಗಂಟುಗಳಿಂದ

(3) ಗೂಡಿನ ಆಕಾರ ನೋಡುವುದರಿಂದ

(4) ಬಳಸುವ ವಸ್ತುಗಳನ್ನು ಗಮನಿಸುವುದರಿಂದ

**100.** ಬಹುಮಹಡಿಯಿರುವ ವಿಶಾಲ ಗೂಡುಗಳನ್ನು ಕಟ್ಟುವ ಕಲೆ

(1) ಆಫ್ರಿಕಾದ ಎಲ್ಲಾ ಪಕ್ಷಿಗಳಿಗಿದೆ

(2) ನೇಕಾರ ಪಕ್ಷಿಗಳಿಗಿದೆ

(3) ಆಫ್ರಿಕಾದ ಸೋಶಿಯಲ್ ವೀವರ್ ಪಕ್ಷಿಗಳಿಗಿದೆ

(4) ಎಲ್ಲಾ ಗೀಜುಗ ಪಕ್ಷಿಗಳಲ್ಲಿದೆ

**101.** "ಅಗಲವಿರುತ್ತದೆ" – ಇದು ಯಾವ ಸಂಧಿಗೆ ಉದಾಹರಣೆ ?

(1) ಆಗಮ ಸಂಧಿ

(2) ಅವ್ಯಯೀಭಾವ

(3) ಲೋಪ ಸಂಧಿ

(4) ಆದೇಶ ಸಂಧಿ

**102.** 'ಗೀಜುಗ' ಗೂಡು ಕಟ್ಟಲು ಮೊದಲ ಆದ್ಯತೆಯ ಸ್ಥಳ ಯಾವುದು ?

(1) ಹಾಳು ಬಾವಿಗಳ ಮೇಲೆ ಚಾಚಿಕೊಂಡಿರುವ ಗಟ್ಟಿಯಾದ ಟೊಂಗೆಗಳು

(2) ಗಟ್ಟಿಯಾದ ಮರದ ಟೊಂಗೆಗಳು

(3) ನಗರ/ಪಟ್ಟಣ ಪ್ರದೇಶ

(4) ಹಾಳು ಬಾವಿಗಳು

**103.** ಇದರಲ್ಲಿ ನಿಷೇಧಾರ್ಥಕ ವಾಕ್ಯ ಗುರುತಿಸಿ

(1) ಗಂಡು ಹಕ್ಕಿ ಗೂಡು ನಿರ್ಮಿಸದೇ ಇರುವುದಿಲ್ಲ

(2) ಹೆಣ್ಣು ಹಕ್ಕಿ, ಗಂಡು ಹಕ್ಕಿ ನಿರ್ಮಿಸಿದ ಗೂಡಿಗೆ ಬಾರದೇ ಇರುವುದಿಲ್ಲ

(3) ಗೂಡನ್ನು ನಿರ್ಮಿಸುವುದು ಗಂಡು ಹಕ್ಕಿ ಎಂದು ಬೇರೆ ಹೇಳಬೇಕಾಗಿಲ್ಲ

(4) ಹೆಣ್ಣು ಹಕ್ಕಿ ಗೂಡು ನಿರ್ಮಿಸುವುದಿಲ್ಲ

**104.** 'ಗಂಟು' ಶಬ್ದದ ತತ್ಸಮ ರೂಪ - ಗುರುತಿಸಿ.

(1) ಗೂಡು

(2) ಗಟ್ಟಿ

(3) ಗಂಡು

(4) ಗ್ರಂಥಿ

**105.** ಅನೇಕ ಪಕ್ಷಿ ವೀಕ್ಷಕರ ಅಭಿಪ್ರಾಯದಂತೆ ನೇಕಾರ ಹಕ್ಕಿಗಳ ಗೂಡುಗಳು ಹಲವಾರು ವರ್ಷಗಳು ಬಾಳಬಲ್ಲವು. ಇದರ ಅರ್ಥ

(1) ಅನುಮಾನ - ಸಂಶಯ

(2) ಕೇವಲ ಅಭಿಪ್ರಾಯ ಮಾತ್ರ

(3) ಸಂಭಾವನಾರ್ಥಕ

(4) ವಿಧ್ಯರ್ಥಕ - ನಿಶ್ಚಿತ

*ನಿರ್ದೇಶನಗಳು : ಅತ್ಯಂತ ಸಮಂಜಸವಾದ ವಿಕಲ್ಪ (Option) ವನ್ನು ಆಯ್ದು ಕೆಳಗೆ ಕೊಟ್ಟ ಪ್ರಶ್ನೆಗಳನ್ನು ಉತ್ತರಿಸಿ.*

**106.** ಭಾಷಾ ಕಲಿಕೆಯ ಅವಧಿಯಲ್ಲಿ 'ನಿರ್ಣಯಾತ್ಮಕ ಅವಧಿ' ಎಂದರೆ

(1) ಯಾವುದೇ ಭಾಷಾಯೋಜನೆಯ ಅತ್ಯುತ್ತಮ ಪೂರ್ವಸಿದ್ಧತಾ ಅವಧಿ

(2) ಭಾಷಾ ಬಳಕೆಯನ್ನು ತೀವ್ರವಾಗಿ ಅಭ್ಯಾಸಮಾಡಲು ವಿದ್ಯಾರ್ಥಿಗಳಿಗೆ ನಿಗದಿಪಡಿಸಲಾದ ವಿಶ್ಲೇಷ ಕಾಲಾವಧಿ

(3) ಬೇರಾವುದೇ ಕಾಲಕ್ಕಿಂತ ಹೆಚ್ಚು ಸುಲಭವಾಗಿ ಭಾಷೆಯನ್ನು ಕಲಿಯುವ ಅವಧಿ

(4) ತರಗತಿಯಲ್ಲಿ ಮಹತ್ವದ ಮೌಲ್ಯನಿರ್ಣಯ ಕೊಡುವ ಮೊದಲಿನ ಕಾಲಾವಧಿ

**107.** ಸಾರಾಂಶವನ್ನು ಬರೆಯಲು ಬೇಕಾದ ಎರಡು ಕೌಶಲಗಳು ಯಾವುವೆಂದರೆ

(1) ದೊಡ್ಡ ಮತ್ತು ಚಿಕ್ಕ ಅಂಶಗಳನ್ನು ಗುರುತಿಸುವುದು, ಆಲೋಚನೆಗಳ ಏಣಿ ಶ್ರೇಣಿಗಳನ್ನು ಗುರುತಿಸುವುದು

(2) ಸಂಬಂಧಸೂಚಕಗಳನ್ನು ಬಳಸಿ, ನಿಖರವಾಗಿ ಬರೆಯುವುದು

(3) ಪದಗಳ ಬದಲು ಸಂಕೇತಗಳನ್ನು ಬಳಸುವುದು, ನಿಖರವಾಗಿ ಬರೆಯುವುದು

(4) ನಿಮ್ಮದೇ ಪದಗಳಲ್ಲಿ ಪಠ್ಯವೊಂದನ್ನು ಮರು ರಚಿಸುವುದು, ಸಮಾನಾರ್ಥಕ ಪದಗಳನ್ನು ಬಳಸುವುದು

**108.** ಒಬ್ಬ ವಿದ್ಯಾರ್ಥಿ ಬೇರೆ ಬೇರೆ 'ಕಾಲಸೂಚಕ ರೂಪ' ಗಳ ನಡುವೆ ವ್ಯತ್ಯಾಸ ಮಾಡುವಾಗ ತೊಂದರೆ ಎದುರಿಸಿದರೆ, ಮರು ಮಧ್ಯಸ್ಥಿಕೆಯೆಂದರೆ

(1) ತರಗತಿಯ ಹೊರಗೂ ಸ್ವರೂಪಗಳನ್ನು ಕಲಿಸಲಾಗುತ್ತದೆ

(2) ನಾನಾಬಗೆಯ ನಿಜ ಜೀವನದ ಸನ್ನಿವೇಶಗಳನ್ನು ಆಧರಿಸಿ ಕಲಿವವರು ಜತೆಗೂಡಿ ಸ್ವರೂಪಗಳನ್ನು ಅಭ್ಯಾಸಮಾಡುವುದು

(3) ಕೆಲವೊಂದು ವಾಕ್ಯರೂಪಗಳನ್ನು ಅಭ್ಯಾಸಮಾಡುವುದಕ್ಕೆ ಸಾಕಷ್ಟು ಅವಕಾಶಗಳನ್ನು ನೀಡುವುದು

(4) ವಿದ್ಯಾರ್ಥಿಗಳು ಸ್ವತಃ ತಾವೇ ವಾಕ್ಯಗಳನ್ನು ರಚಿಸುವುದು ಹಾಗೂ ಈ ಚಟುವಟಿಕೆಯ ಅವಧಿಯಲ್ಲಿ ಮಾರ್ಗದರ್ಶನ ನೀಡುವುದು

**109.** ಸಿ ಸಿ ಇ ಪರಿಚಯದೊಂದಿಗೆ

(1) ಶಿಕ್ಷಣಕ್ಕೆ ಸಂಬಂಧಿಸಿದ ಹಾಗೆ ಹೆಚ್ಚಿನ ಒತ್ತನ್ನು ನೀಡಬಹುದು

(2) ಶಿಕ್ಷಕರು ವಿದ್ಯಾರ್ಥಿಗಳ ಮೇಲೆ ಹೆಚ್ಚು ಹತೋಟಿಯನ್ನು ಸಾಧಿಸಬಹುದು

(3) ವಿದ್ಯಾರ್ಥಿಗಳ ಮೌಲ್ಯನಿರ್ಣಯ ನಿಯತವಾಗಿ ನಡೆಯುತ್ತದೆ

(4) ವಿದ್ಯಾರ್ಥಿಗಳು ಹಲವಾರು ಚಟುವಟಿಕೆಗಳನ್ನು ಆನಂದಿಸಬಹುದು

**110.** 'ಸೃಜನಾತ್ಮಕ ಓದು' ವಿಕೆಗೆ ಉದಾಹರಣೆಗಳು

(1) ಭಿನ್ನ ದೃಷ್ಟಿಕೋನದಿಂದ ನಾಟಕೀಕರಣ, ಪಾತ್ರ ನಿರ್ವಹಣೆ ಮತ್ತು ಮರುಬರೆವಣಿಗೆ

(2) ಅರ್ಥಕ್ಕಾಗಿ ಓದುವುದು

(3) ಒಂದು ವಿಷಯದ ಬಗ್ಗೆ ಹೆಚ್ಚು ಮಾಹಿತಿಗಾಗಿ ಗ್ರಂಥಾಲಯದಲ್ಲಿ ಮಾಡಲಾಗುವ ಪರಾಮರ್ಶನ ಕೆಲಸ

(4) ಸಂಬಂಧಿಸಿದ ಮಾಹಿತಿಗಾಗಿ ಅಂತರ್ಜಾಲ (ಇಂಟರ್‌ನೆಟ್) ಜಾಲಾಡುವುದು

**111.** 'ಸ್ಥೂಲವಾಗಿ ಕಣ್ಣಾಡಿಸುವುದು' ಎಂದರೇನು ?

(1) ಪ್ರಸ್ತುತ ಮಾಹಿತಿಯನ್ನು ಓದಿನಿಂದ ಬರಹ ರೂಪಕ್ಕೆ ವರ್ಗಾಯಿಸುವುದು

(2) ಆಲೋಚನೆಗಳು, ಒಳಾರ್ಥಗಳು, ಅಥವಾ ಮಾಹಿತಿಯ ಅನುಕ್ರಮಣಿಕೆ ಬಗ್ಗೆ ಓದುವಾಗ ತೀರ್ಮಾನಗಳನ್ನು ಮಾಡುವುದು

(3) ಸಾಮಾನ್ಯ ವಸ್ತುವಿಷಯ, ಆಲೋಚನೆಗಳು ಅಥವಾ ಸಾರಾಂಶವನ್ನು ಕಂಡುಕೊಳ್ಳಲು ಬೇಗ ಬೇಗ ಕಣ್ಣಾಡಿಸುವುದು

(4) ಮಾಹಿತಿಯ ನಿರ್ದಿಷ್ಟ ವಿಷಯಗಳನ್ನು ಹುಡುಕಲು, ಅಪ್ರಸ್ತುತ ವಿವರಗಳನ್ನು ಕೈಬಿಡಲು ಸತ್ಯವನ್ನು ನೋಡಿಕೊಂಡು ಹೋಗುವುದು

**112.** 'ಪಾಠ್ಯಿಕ ಸುಸಂಬದ್ಧತೆ' ಎಂದರೆ

(1) ಮನಬಂದ ಮಾಹಿತಿಯನ್ನು ಸುದೀರ್ಘ, ಮುಂದುವರಿದ ಪಠ್ಯದಲ್ಲಿ ಬರೆದಿಡುವುದು

(2) ಪ್ಯಾರಾಗಳು/ವಾಕ್ಯಗಳ ನಡುವಿನ ಸಂಬಂಧಗಳನ್ನು ಸ್ಥಾಪಿಸಲು ಸರ್ವನಾಮಗಳು, ಸಂಬಂಧವಾಚಕಗಳು ಅಥವಾ ಸಮಾನಾರ್ಥಕ ಪದಗಳನ್ನು ಬಳಸುವುದು

(3) ಕತೆಯ ನಿರೂಪಣೆಗೆ ಹೊಂದುವಂತೆ ಪ್ಯಾರಾಗಳನ್ನು ಅನುಕ್ರಮಗೊಳಿಸುವುದು

(4) ಯಾವುದೇ ಪ್ಯಾರಾದಲ್ಲಿ ತಾರ್ಕಿಕವಾಗಿ ದತ್ತಾಂಶವನ್ನು ಪ್ರಸ್ತುತಗೊಳಿಸುವ ವಿಧಾನ

**113.** 'ವಿಶ್ವಾಸಾರ್ಹ ಕೇಳುವಿಕೆ' ಸೂಚಿಸುವುದೇನೆಂದರೆ,

(1) ಮಾತಿನ ಅಥವಾ ದಾಖಲಿಸಲಾದ ರೂಪದಲ್ಲಿರುವ ಸ್ವಾಭಾವಿಕ ಸಂಭಾಷಣೆಯನ್ನು ಕೇಳಿಸಿಕೊಳ್ಳುವುದು

(2) ಶಿಕ್ಷಕರು ಜೋರಾಗಿ ಓದಿರುವ ಅರೆಬರೆಹವನ್ನೊಂದಿರುವ ಅಥವಾ ಸತತವಾಗಿರುವ ಮಾತನ್ನು ಕೇಳಿಸಿಕೊಳ್ಳುವುದು

(3) ಒಂದು ಕೆಲಸಕ್ಕಾಗಿ ಬೇಕಾಗಿರುವ ನಿರ್ದಿಷ್ಟ ಮಾಹಿತಿಗಾಗಿ ಏಕಾಗ್ರತೆಯಿಂದ ಕೇಳುವುದು

(4) ಕೇಳುವ ಗೋಷ್ಠಿಯಲ್ಲಿ ಕೇಳುಗ ತನ್ನ ಕೆಲಸವನ್ನು ಮುಗಿಸುವಾಗಿನ ಹಂತ

114. ಬರೆಹ ಮತ್ತು ಮಾತನ್ನು ಬೇರೆ ಮಾಡುವ ಲಕ್ಷಣಗಳು ಯಾವುವು ?

(1) ವ್ಯಾಕರಣಾತ್ಮಕ ಸ್ವರೂಪಗಳನ್ನು ನಿಕಟವಾಗಿ ಅನುಸರಿಸದಿರುವುದು

(2) ಸಾಮಾನ್ಯವಾಗಿ ಬಹುಪರ್ಯಾಯಗಳನ್ನು ಹೊಂದಿರುತ್ತವೆ

(3) ಪುನರುಕ್ತಿ ಅಥವಾ ಪುನರುಚ್ಚಾರದ ಕೊರತೆ

(4) ನಿರ್ರ್ಗಳತೆಯನ್ನು ಆಧರಿಸಿದ ಚಟುವಟಿಕೆ

115. ಇಂಗ್ಲಿಷ್ ಭಾಷೆಯಲ್ಲಿ 'ಮಾತು ಕೊಡುಕೊಳಿಕೆ' ಸೂಚಿಸುವುದೇನೆಂದರೆ,

(1) ಯಾರಾದರೊಬ್ಬರ ಮಾತು ಅಥವಾ ಬರೆಹ ಸಂವಹನದ ಫಲಿತಾಂಶದ ಬಗ್ಗೆ ನೀಡಲಾದ ಮಾಹಿತಿ

(2) ಒಬ್ಬ ವ್ಯಕ್ತಿಯ ಮಾತಿಗೆ ಅಥವಾ ಔಪಚಾರಿಕ ಮಾತಿಗೆ ವಿರುದ್ಧವಾಗಿರುವ ಇಬ್ಬರ ಮಾತು

(3) ಯಾವುದೇ ನಿಲುಗಡೆಯಿಲ್ಲದೆ ನಿರ್ರ್ಗಳವಾಗಿ ಮತ್ತು ಆತ್ಮವಿಶ್ವಾಸದಿಂದ ಭಾಷೆಯನ್ನು ಬಳಸುವುದು

(4) ಕೇಳುಗರ ಪ್ರತಿಕ್ರಿಯೆಗಳ ಪ್ರಕಾರ ಮಾತನ್ನು ಹೊಂದಿಸುವ ಅಗತ್ಯ

116. ಶಬ್ದಾನುಕ್ರಮಣಿಕೆಯನ್ನು ಕಲಿವವರ ಮಾತಿನ ಕೌಶಲಗಳನ್ನು ಬೆಳೆಸಲು ಹೇಗೆ ಬಳಸಬಹುದು ?

(1) ಕಾರ್ಟೂನುಗಳು ಮತ್ತು ಇತರ ದೃಶ್ಯರೂಪಗಳನ್ನು ಅದರ ಸುತ್ತ ಮಾತಿನ ಚಟುವಟಿಕೆಗಳನ್ನು ರೂಪಿಸಲು ಬಳಸಿಕೊಳ್ಳುವುದು

(2) ಕೇವಲ ವಸ್ತು ಸಂಗತಿಗಳು ಪದಪುಂಜಗಳ ಮೊತ್ತದ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ತಮ್ಮ ಪಾಠಾಂತರ ಹೇಳುವಂತೆ ಕೇಳುವುದು

(3) ದಾಖಲಿಸಲಾಗಿರುವ ಧ್ವನಿಗಳ ಸರಣಿಯನ್ನು ಕೇಳಿಸಿಕೊಂಡ ನಂತರದ ಕಥೆಯ ರೂಪದಲ್ಲಿ ಅರ್ಥೈಸುವಂತೆ ಅಥವಾ ವಿವರಿಸುವಂತೆ ವಿದ್ಯಾರ್ಥಿಗಳನ್ನು ಕೇಳುವುದು

(4) ಉದ್ದೇಶಪೂರ್ವಕ ಉಕ್ತಲೇಖನ (dictation) ಮಾತಿನ ಚಟುವಟಿಕೆಯೊಂದಿಗೆ ಸೇರಿಸಿ ನೀಡುವುದು

117. ಒಬ್ಬ ವ್ಯಕ್ತಿಯ ಏಕೋಕ್ತಿಯ (monologue) ಮೂಲಕ ಗೊತ್ತುಮಾಡಿಕೊಳ್ಳಬಹುದಾದ 3 ಉಪಕೌಶಲಗಳೆಂದರೆ,

(1) ಧ್ವನಿಯ ಗುಣಮಟ್ಟ, ಶೈಲಿ, ಮಾತುಗಾರನ ಹೊರ ರೂಪ

(2) ಮಾತುಗಾರನ ಅನುಮಾನ, ಸ್ವರ, ಸಂದರ್ಭ

(3) ಅಂಗಸನ್ನೆ, ಮಾತುಗಾರನ ಅನುಮಾನ, ಮಾತುಗಾರನ ಹೊರ ರೂಪ

(4) ಸ್ವರ, ಧ್ವನಿಯ ಗುಣಮಟ್ಟ, ವೇಗ

118. 'ಸಂಪಾದನೆ - ಶೂನ್ಯ ಪರಿಸರ' ವೆಂದರೆ,

(1) ಮನೆಯಲ್ಲಿ ಇಂಗ್ಲಿಷ್ ಮಾತನಾಡದೇ ಇರುವುದು

(2) ನಿಮ್ಮ ವಿದ್ಯಾರ್ಥಿಗಳಿಗೆ ಯಾವುದೇ ಪ್ರವೇಶ ದೊರೆಯದಿರುವುದು

(3) ಹಿಂದಿ/ಮಾತೃಭಾಷೆ ಸರ್ವೇಸಾಮಾನ್ಯ ಭಾಷೆಯಾಗಿರುವುದು

(4) ಇಂಗ್ಲಿಷ್ ಭಾಷೆಯ ಪ್ರವೇಶ ತರಗತಿಗೆ ಸೀಮಿತಗೊಳಿಸಿರುವುದು

119. ಯಾವ ಜೋಡಿ 'ಅರಿವಿನ ಶೈಲಿ'ಯನ್ನು ರಚಿಸುತ್ತದೆ ?

(1) ಸಕ್ರಿಯ / ಜಡ

(2) ಕ್ಷೇತ್ರಾವಲಂಬನೆ / ಕ್ಷೇತ್ರಸ್ವಾವಲಂಬನೆ

(3) ಸ್ಪರ್ಧಾತ್ಮಕ / ಸಹಯೋಗದ

(4) ವ್ಯಾಖ್ಯಾನಿಸುವ / ಶಬ್ದಶಃ

120. ವಿಚಾರಣೆಯನ್ನು ಆಧರಿಸಿದ ಕಲಿಕೆ (Enquiry Based Learning = EBL)

(1) ವಿದ್ಯಾರ್ಥಿಗಳು ಜತೆಗೂಡಿ ಸಮಸ್ಯೆಗಳನ್ನು ಬಗೆಹರಿಸುವ ಹಾಗೂ ತಮ್ಮ ಅನುಭವಗಳ ಮೇಲೆ ಬೆಳಕು ಚೆಲ್ಲುವ ಬೋಧನಾ ವಿಧಾನ

(2) ಭಾಷಾ ಕಲಿಕೆಗೆ ಪ್ರವೇಶ ಒದಗಿಸುವ ಸಿದ್ಧಾಂತ

(3) ಕ್ರಮಬದ್ಧ ಮಂಡನೆ ಮತ್ತು ಕೌಶಲಗಳ ಅಭ್ಯಾಸ ಮತ್ತು ವಿಷಯದ ಕಲಿಕೆ

(4) ಕಾಲ್ಪನಿಕ-ಕ್ರಿಯಾತ್ಮಕ ಪಠ್ಯಕ್ರಮದಂತಹ ಶಬ್ದಾರ್ಥ ಪಠ್ಯಕ್ರಮ

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ನ್ನಾಗಿ ಆಯ್ಕೆಮಾಡಿದ್ದಲ್ಲಿ, ಮುಂದಿನ ಭಾಗದಲ್ಲಿರುವ ಪ್ರಶ್ನೆಗಳಿಗೆ ಉತ್ತರಿಸತಕ್ಕದ್ದು.

# ಭಾಗ V
# ಭಾಷೆ II
# ಕನ್ನಡ

*ನಿರ್ದೇಶನಗಳು : ಅತ್ಯಂತ ಸಮಂಜಸವಾದ ವಿಕಲ್ಪ (Option) ವನ್ನು ಆಯ್ದು ಕೆಳಗೆ ಕೊಟ್ಟ ಪ್ರಶ್ನೆಗಳನ್ನು ಉತ್ತರಿಸಿ.*

**121.** ಭಾಷಾ ಸಂಪಾದನೆ

(1) ಮಾನವ ಮೆದುಳಿನ ಸ್ವಾಭಾವಿಕ ಸಾಮರ್ಥ್ಯದಿಂದಾಗಿ ಸ್ಥಳೀಯ ಅಥವಾ ಎರಡನೆ ಭಾಷೆಯನ್ನು ಕಲಿಯುವ ಪ್ರಕ್ರಿಯೆಗೆ ಸಂಬಂಧಿಸಿದೆ

(2) ಮಕ್ಕಳು ತಮ್ಮ ಸ್ಥಳೀಯ ಭಾಷೆಯನ್ನು ಅನುಕರಿಸುವುದನ್ನು ಉದ್ದೇಶಿಸಿರುವ ಒಂದು ತಂತ್ರ

(3) ನೆನಪಿನಲ್ಲಿಡುವಿಕೆ ಹಾಗೂ ಆವಶ್ಯಕ ಪದಸಂಪತ್ತನ್ನು ಒಳಗೊಂಡಿದೆ

(4) ವ್ಯಾಕರಣದ ವಿಶ್ಲೇಷಣೆ ಮತ್ತು ಗ್ರಹಿಕೆ ಹಾಗೆಯೇ ಪದಸಂಪತ್ತಿನ ನೆನಪಿನಲ್ಲಿಡುವಿಕೆಗೆ ಕ್ರಮಬದ್ಧವಾದ ವಿಧಾನವನ್ನು ಒಳಗೊಂಡಿದೆ

**122.** ಮೋಮ್ ಚೋಮ್‌ಸ್ಕಿಯವರ 'ಆಳವಿನ್ಯಾಸಗಳು' (Deep structures) ಎಂದರೆ,

(1) ಇಂಗ್ಲಿಷ್ ವಿಶ್ವದ ಅತ್ಯಂತ ಸಾಮಾನ್ಯ ಸಹಾಯಕ ಭಾಷೆ ಎಂಬ ಪ್ರಕೃತಿ

(2) ಎಲ್ಲ ಭಾಷೆಗಳನ್ನೊಳಗೊಂಡಿರುವ ಸಾರ್ವತ್ರಿಕ ವ್ಯಾಕರಣ ಹಾಗೂ ಮಾನವ ಮೆದುಳಿನ ಸ್ವಾಭಾವಿಕ ಸಾಮರ್ಥ್ಯಕ್ಕೆ ಹೊಂದುವಂತದ್ದು

(3) ಆಳ ಅಧ್ಯಯನದ ಮೂಲಕ ಸುಪ್ತವಾಗಿರುವ ವ್ಯಾಕರಣಾತ್ಮಕ ನಿಯಮಗಳ ಕಟ್ಟು

(4) ತುಲನಾತ್ಮಕ ವ್ಯಾವಕರಣದಲ್ಲಿ ಆಸಕ್ತಿ ಹೆಚ್ಚಿಸಲು ಕಾರಣವಾದ ಪರಿವರ್ತಕ ವ್ಯಾಕರಣ (transformational grammar)

**123.** ಪಠ್ಯಪಾಠ ಕ್ರಮದ ಬಾಟಮ್ ಅಪ್ ಮಾದರಿ ಯೆಂದರೆ,

(1) ಕಲಿಕಾ ಪ್ರಕ್ರಿಯೆಯು ವ್ಯಕ್ತಿ ಜೀವನದೆಡೆಗೆ ಮುಖ ಮಾಡಿಸಿರುವಂತದ್ದು

(2) ವಿದ್ಯಾರ್ಥಿಗಳ ಮೇಲೆ ಅಪರೋಕ್ಷ ಪ್ರಭಾವದೊಂದಿಗಿರುವ ಆವಶ್ಯಕತೆಯನ್ನಾಧರಿಸಿದ ದೂರ ಶಿಕ್ಷಣ

(3) ಪಠ್ಯಪಾಠ ಕ್ರಮವನ್ನು ಹೆಚ್ಚು ಬಳಕೆದಾರ ಸ್ನೇಹಿಯನ್ನಾಗಿಸಲು ತಂತ್ರಾಂಶ (software) ದ ಆದರಿಸಿದ ಕಲಿಕೆ

(4) ಪಠ್ಯಪಾಠ ಕ್ರಮದ ಚಟುವಟಿಕೆಗೆ ಹೆಚ್ಚಿನ ಆಯ್ಕೆ ನೀಡುವ ಹಾಗೂ ಹಾಗೆ ಮಾಡುವ ಮೂಲಕ ಕಲಿಕೆಯನ್ನು ಉತ್ತೇಜಿಸುವುದರೊಂದಿಗೆ ವಿದ್ಯಾರ್ಥಿಗಳ ಚಲನೆಗೆ ಸ್ವಾತಂತ್ರ್ಯವನ್ನು ನೀಡುವ ಪಠ್ಯಪಾಠಕ್ರಮ

**124.** ಮಾನವಿಕ ವಿಧಾನ (Humanistic Approach) ನಿರ್ದಿಷ್ಟವಾಗಿ ಇದಕ್ಕೆ ಹೊಂದಿಸಲಾಗಿದೆ

(1) ತಮ್ಮ ಸ್ವರೂಪಗಳನ್ನು ಶೋಧಿಸಲು ವಿದ್ಯಾರ್ಥಿಗಳನ್ನು ಸಮರ್ಥವಾಗಿಸುವ ಪ್ರಕ್ರಿಯೆಗಳು

(2) ಸಂಬಂಧಿಸಿದ ವಸ್ತು ವಿಷಯಗಳನ್ನು ಹೇಗೆ ಮಂಡಿಸಬೇಕೆನ್ನುವುದರೊಂದಿಗೆ ಅನುಕ್ರಮಣಿಕೆಯನ್ನು ಕಲಿಸಲಾಗುವ ಪ್ರಕ್ರಿಯೆ

(3) ಶೈಕ್ಷಣಿಕ ಜ್ಞಾನ ಶಿಸ್ತುಗಳ ಎಲ್ಲ ಗುಣಲಕ್ಷಣಗಳೊಂದಿಗೆ ನುರಿತತೆ

(4) ಹೊಸ ಸನ್ನಿವೇಶಗಳಿಗೆ ಕಲಿತ ಸ್ವರೂಪ, ವಸ್ತುವಿಷಯ, ಪರಿಕಲ್ಪನೆಗಳು ಮತ್ತು ತತ್ವಗಳ ಅನ್ವಯ

**125.** ವಿಶೇಷ ಆವಶ್ಯಕತೆಗಳ ತರಗತಿ ಎಂದರೆ ಮಾದರಿಯಾಗಿ,

(1) ಎಲ್ಲ ವಿಧದ ಕಲಿಕೆಯನ್ನು ಸಮಗ್ರವಾಗಿಸುತ್ತದೆ

(2) ನಿಯತವಾದ ಶಿಕ್ಷಕರಿಗೆ ಸಹಾಯಮಾಡಲು ಹೆಚ್ಚುವರಿ ಶಿಕ್ಷಕರಿರುತ್ತಾರೆ

(3) ವಿಶೇಷವಾಗಿ ಸಜ್ಜು ಗೊಂಡಿರುತ್ತದೆ

(4) ಪ್ರತ್ಯೇಕವಾಗಿ ಇರುತ್ತದೆ

**126.** ಮುನ್ನೋದಿನ (pre-reading) ಚಟುವಟಿಕೆಗಳ ಉದ್ದೇಶವೇನು ?

(1) ಪಾಠದಲ್ಲಿ ಆಸಕ್ತಿಯನ್ನು ಹುಟ್ಟಿಸುವುದು

(2) ಸಂತೋಷದಾಯಕ ಕಲಿಕೆಯ ಅನುಭವಗಳನ್ನು ನೀಡುವುದು

(3) ಹೊಸ ಪದಗಳನ್ನು ಕಲಿಸುವುದು

(4) ವಿದ್ಯಾರ್ಥಿಗಳ ಜ್ಞಾನ ವನ್ನು ಹೆಚ್ಚಿಸುವುದು

**127.** ಏನೇ ಬಂದರೂ ಹಿಂಜರಿಯದ ಮನೋಭಾವ (Never Give Up Attitude) ವ ಒಂದು ಸೂಕ್ತವಾದ ಚಟುವಟಿಕೆ, ಅಂದರೆ ವಿದ್ಯಾರ್ಥಿಗಳು

(1) ಜೀವನದಲ್ಲಿ ವಿದ್ಯಾರ್ಥಿಗಳು ಎದುರಿಸಬೇಕಾದ ಕಷ್ಟಕರ ಸನ್ನಿವೇಶಗಳ ಬಗ್ಗೆ ಗುಂಪಿನಲ್ಲಿ ಗ್ರಾಫ್ ರಚನೆ ಮಾಡುವುದು

(2) ಇಂಗ್ಲಿಷ್ ತರಗತಿಯ ವೇಳೆ ಹೊರಗೆ ಹೋಗಿ ಆಟವಾಡಲು ಪ್ರಾಂಶುಪಾಲರ ಅನುಮತಿ ಪಡೆಯುವುದು

(3) ಎರಡು ಜನಪ್ರಿಯ ಹಾಡುಗಳನ್ನು ಹಾಡಿ ತಮ್ಮ ಕಲೆ ಮತ್ತು ಕುಸುರಿ ಕೆಲಸವನ್ನು ಪೋಷಕ-ಶಿಕ್ಷಕರ ಸಭೆಯಲ್ಲಿ ಪ್ರದರ್ಶಿಸುವುದು

(4) ತಮ್ಮ ಕಾಗದ ವಿಮಾನ ಗಳನ್ನು ಮಾರ್ಪಡಿಸಿ, ಮತ್ತೆ ಪರೀಕ್ಷಿಸುತ್ತಾರೊ, ಅತ್ಯುತ್ತಮವಾಗಿ ಪ್ರಯೋಗ ಮಾಡಿ ಅವು ಸಾಧ್ಯವಾದಷ್ಟು ದೂರ ಹೋಗುವಂತೆ ಮಾಡುವುದು ಮತ್ತು ತಮ್ಮ ಕಾಣ್ಕೆಗಳನ್ನು ಹಂಚಿಕೊಳ್ಳುವುದು

**128.** ಪ್ರಾರಂಭಿಕ ಹಂತದಲ್ಲಿನ ಓದುವಿಕೆಯ ಮೌಲ್ಯನಿರ್ಣಯವನ್ನು ಅತ್ಯಂತ ಪರಿಣಾಮಕಾರಿಯಾಗಿ ಈ ರೀತಿಯಾಗಿ ಮಾಡಬಹುದು

(1) ನೇರವಾಗಿ ಪ್ರಶ್ನಿಸುವ ಮೂಲಕ ಅವರು ಎಷ್ಟು ಓದಿದ್ದಾರೆಂದು ತಿಳಿಯುವುದು

(2) ಒಂದು ಸಣ್ಣ ಕೆಲಸವಾಗಿ 50 ಪದದ ಪುಸ್ತಕ/ಪಠ್ಯದ ಬಗ್ಗೆ ವಿಮರ್ಶೆ ಬರೆಯುವುದು

(3) ಪದಗಳು ಮತ್ತು ಅಭಿವ್ಯಕ್ತಿಗಳ ಅರ್ಥಗಳನ್ನು ಆಧರಿಸಿದ ಮಾತಿನ ರಸಪ್ರಶ್ನೆ

(4) ಕತೆ/ಪಠ್ಯದಲ್ಲಿನ ಪಾತ್ರಗಳು ಮತ್ತು ಘಟನೆಗಳನ್ನು ಆಧರಿಸಿದ ಲಿಖಿತಪರೀಕ್ಷೆ

**129.** ಪಠ್ಯ ಪಾಠ ಕ್ರಮ ಬೆಳವಣಿಗೆಯು ಈ ಕೆಳಕಂಡ ಅನುಕ್ರಮಣಿಕೆಯನ್ನು ಅನುಸರಿಸುತ್ತದೆ.

(1) ಆವಶ್ಯಕತೆಗಳ ವಿಶ್ಲೇಷಣೆ, ಧ್ಯೇಯೋದ್ದೇಶಗಳನ್ನು ರೂಪಿಸುವಿಕೆ, ಪಠ್ಯಗಳ ಆಯ್ಕೆ/ಕಲಿಕೆಯ ಅನುಭವಗಳು/ಮೌಲ್ಯನಿರ್ಣಯ

(2) ಧ್ಯೇಯೋದ್ದೇಶಗಳನ್ನು ರೂಪಿಸುವಿಕೆ, ಆವಶ್ಯಕತೆಗಳ ಮೌಲ್ಯನಿರ್ಣಯ, ಮೌಲ್ಯಮಾಪನ, ಪಠ್ಯಗಳ ಆಯ್ಕೆ/ಕಲಿಕೆಯ ಅನುಭವಗಳು

(3) ಧ್ಯೇಯೋದ್ದೇಶಗಳನ್ನು ರೂಪಿಸುವಿಕೆ, ಆವಶ್ಯಕತೆಗಳ ಮೌಲ್ಯನಿರ್ಣಯ, ಪಠ್ಯಗಳು ಆಯ್ಕೆ/ಕಲಿಕೆಯ ಅನುಭವಗಳು, ಮೌಲ್ಯಮಾಪನ

(4) ಪಠ್ಯಗಳ ಆಯ್ಕೆ/ಕಲಿಕೆಯ ಅನುಭವನವು, ಆವಶ್ಯಕತೆಗಳ ಮೌಲ್ಯನಿರ್ಣಯ, ಧ್ಯೇಯೋದ್ದೇಶಗಳ ಮಾಡಿಸುವಿಕೆ, ಮೌಲ್ಯಮಾಪನ

**130.** ಕಲಿಯುವವರಿಗೆ ಪ್ರಾತಿನಿಧಿಕ (vicarious) ಅನುಭವವನ್ನು ನೀಡುವ ಮಾಧ್ಯಮವೆಂದರೆ

(1) ಪ್ರದರ್ಶನ ಬೋರ್ಡುಗಳು, ಚಿತ್ರದ ತುಣುಕುಗಳು

(2) ಕ್ಷೇತ್ರ ಪ್ರವಾಸಗಳು, ವೀಕ್ಷಣೆಗಳು

(3) ನಿಜವಾದ ವಸ್ತುಗಳು ಮತ್ತು ಮಾದರಿಗಳು

(4) ಅಮೂರ್ತಪದಗಳು, ಪ್ರಕರಣ ಅಧ್ಯಯನ (case study)

**131.** ಕಂಪ್ಯೂಟರ್ ನೆರವಿನ ಬೋಧನೆ (Computer Aided Instruction – CAI) ಯಲ್ಲಿ, ಅನುಕರಣಾ ಮಾದರಿ ಎಂದರೆ ಕಲಿಯುವವರು

(1) ಪುನರಾವರ್ತನೆಯ ಅಭ್ಯಾಸದೊಂದಿಗೆ ಅಭ್ಯಾಸ ಪಾಠಗಳ ಸರಣಿ

(2) ತಪ್ಪೋ ಸರಿಯೋ ಪ್ರಯೋಗಿಸಿ ನೋಡು (trial and error) ಪ್ರಕ್ರಿಯೆಯ ಮೂಲಕ ಸಮಸ್ಯೆಗಳನ್ನು ಬಗೆ ಹಂಸುವುದು

(3) ನಿಜಜೀವನದ ವ್ಯವಸ್ಥೆಗಳು ಮತ್ತು ಸಂತತಿಗಳನ್ನು ಅನುಭವಿಸುತ್ತಾರೆ

(4) ಪ್ರಶ್ನೆಗಳು ಮತ್ತು ತಕ್ಷಣದ ಪ್ರತಿಕ್ರಿಯೆಯನ್ನು ಅನುಸರಿಸಿ ಮಾಹಿತಿಯ ತುಣುಕುಗಳನ್ನು ತಡೆಯುತ್ತಾರೆ

**132.** ಕೇಳುವ ಪ್ರೇರಣೆ ಯೆಂದರೆ,

(1) ವಿಮರ್ಶಿಸಲು ಒಳ್ಳೆಯ ವ್ಯಾಖ್ಯಾನವನ್ನು ಕೇಳುವುದು

(2) ಕೆಲಸವೊಂದನ್ನು ಮುಗಿಸಿ ಮಂಡಿಸಲು ವಿದ್ಯಾರ್ಥಿಗಳು ಕೇಳಿಸಿಕೊಳ್ಳಲು ಅನುವುಮಾಡಿಕೊಡುತ್ತದೆ

(3) ತಾವು ಕೇಳಿದ್ದನ್ನು ಹಂಚಿಕೊಳ್ಳಲು ಮತ್ತೇ ಸೇರುವ ವಿದ್ಯಾರ್ಥಿಗಳ ಪ್ರತ್ಯೇಕ ಗುಂಪಿಗೆ ಕೊಟ್ಟಿದ್ದನ್ನು ಮಂಡಿಸುವುದು

(4) ನಿರ್ದೇಶನಗಳನ್ನು ನೀಡುವಂತಹ ಮಾಹಿತಿ ತೆರಪು ಚಟುವಟಿಕೆಯನ್ನು ಮಂಡಿಸುತ್ತದೆ

**133.** ಮಾತನಾಡುವುದರ ಮೌಲ್ಯ ನಿರ್ಣಯದ ಸಂದರ್ಭದಲ್ಲಿ ಪಾರಸ್ಪರ ವಿನಿಮಯ ದಿನಚರಿ ಯೆಂದರೆ,

(1) ಬೇರೊಬ್ಬರೊಂದಿಗೆ ಟೆಲಿಫೋನ್ ಸಂಭಾಷಣೆ ನಡೆಸುವುದು

(2) ಮೌಲ್ಯನಿರ್ಣಯಕಾರನಿಗೆ ಎರಡು ಅಥವಾ ಎರಡಕ್ಕಿಂತ ಹೆಚ್ಚು ವಸ್ತುಗಳು/ಸ್ಥಳಗಳು/ ಸಂಗತಿಗಳನ್ನು ಹೋಲಿಸುವುದು

(3) ಅರ್ಥಗಳ ವಿನಿಮಯ ಮಾಡಿಕೊಳ್ಳುವುದು, ಸರದಿ ತೆಗೆವು ಕೊಳ್ಳುವುದು ಮತ್ತು ಬೇರೆಯವರಿಗೆ ಸರದಿ ತೆಗೆದುಕೊಳ್ಳಲು ಅನುವು ಮಾಡಿಕೊಡುವುದು

(4) ಅನೌಪಚಾರಿಕವಾಗಿ ಒಬ್ಬರ ಶಾಲೆ ಮತ್ತದರ ಪರಿಸರದ ಬಗ್ಗೆ ವಿವರಿಸುವುದು

**134.** ಬರವಣಿಗೆಯಲ್ಲಿ ಮರಳಿಪಡೆಯುವ ಕೌಶಲಗಳು ಎಂದರೆ

(1) ವ್ಯಾಪಕವಾದ ಪರಾಮರ್ಶನ ಕೆಲಸ ಮಾಡುವ ಸಾಮರ್ಥ್ಯ

(2) ಓದುವ/ಕೇಳುವ ಸಂದರ್ಭದಲ್ಲಿ ಮಾಹಿತಿಯನ್ನು ಕ್ರಮಗೊಳಿಸುವುದು

(3) ಟಿಪ್ಪಣಿ ಮಾಡಿಕೊಳ್ಳುವುದು ಮತ್ತು ಟಿಪ್ಪಣಿ ತೆಗೆದು ಕೊಳ್ಳುವುದು

(4) ರೇಖಾ ಚಿತ್ರ ಬರೆಯಕೊಳ್ಳುವುದು ಅಥವಾ ಸಾರಾಂಶ ಮಾಡಿಕೊಳ್ಳುವುದು

**135.** ಅರಿವು ಮೂಡಿಸುವ ವ್ಯಾಕರಣದಾಟಗಳು ವಿದ್ಯಾರ್ಥಿಗಳು ಹೀಗೆ ಮಾಡಲು ಉತ್ತೇಜಿಸುತ್ತವೆ

(1) ಶಿಕ್ಷಕರು ಸ್ವರೂಪಗಳನ್ನು ನಿಯಂತ್ರಿಸುವಾಗ ಅದರಲ್ಲಿ ಸೇರಿಕೊಂಡು ಆನಂದಿಸುವುದು

(2) ಒಂದು ನೀಡಲಾದ ವಿಷಯ ವಸ್ತುವಿನ ಬಗ್ಗೆ ಒಬ್ಬರು ಮತ್ತೊಬ್ಬರ ಬಗ್ಗೆ ಸಂವಹನಸಾಧಿಸಲು ಕಲಿತ ಸ್ವರೂಪಗಳನ್ನು ಬಳಸುವುದು

(3) ಅವರು ಕಲಿತಿರುವ ಪ್ರರೂಪಗಳ ಬಗ್ಗೆ ಪ್ರಜ್ಞಾಪೂರ್ವಕವಾಗಿ ಯೋಚಿಸುವುದು

(4) ನೀಡಿರುವ ಚಟುವಟಿಕೆಯನ್ನು ಪೂರ್ಣಗೊಳಿಸಲು ಸಹೆಯೋಗ ನೀಡುವುದು

*ನಿರ್ದೇಶನಗಳು : ಕೆಳಗೆ ಕೊಟ್ಟಿರುವ ಗದ್ಯ ಭಾಗವನ್ನು ಓದಿ ಅದರ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರ.ಸಂ. 136 ರಿಂದ 144) ಅತ್ಯಂತ ಸೂಕ್ತವಾದವುಗಳನ್ನು ಆರಿಸಿ ಉತ್ತರಿಸಿ.*

ವಾಸ್ತುಶಿಲ್ಪ ಮತ್ತಿತರ ವಿಷಯಗಳಲ್ಲಿಯೂ ಸಹ ಹೊಯ್ಸಳರಸರು ಚಾಲುಕ್ಯರ ಸಂಪ್ರದಾಯಗಳನ್ನೇ ಅಳವಡಿಸಿಕೊಂಡರು. ಚಾಲುಕ್ಯರ ದೇವಾಲಯಗಳಲ್ಲಿ ಹೆಚ್ಚಿನ ಪಾತ್ರ ವಹಿಸಿದ ಶೃಂಗಾರ, ಸೊಬಗು, ಶಿಲ್ಪ ಮತ್ತು ಪ್ರತಿಮೆಗಳ ಕೆತ್ತನೆಯು ಹೊಯ್ಸಳ ವಾಸ್ತು ಶಿಲ್ಪದಲ್ಲಿಯೂ, ಪ್ರಮುಖ ಮತ್ತು ಪೂರ್ಣರೂಪದ ಅಂಶಗಳಾದವು. ರಮ್ಯತೆ, ಕುಶಲತೆ, ವಿವರಗಳ ಅತಿ ಸೂಕ್ಷ್ಮತೆ, ಇವುಗಳು ಹೊಯ್ಸಳ ಕಲಾವಿದರ ಜಗತ್ತಿನಲ್ಲಿಯೇ ಉತ್ಕೃಷ್ಟತೆಯನ್ನು ಸಾಧಿಸಿದ ಅಪೂರ್ವ ಪ್ರತಿಭೆಗಳಾಗಿವೆ. ಹೊಯ್ಸಳರ ಆಳ್ವಿಕೆಯ ಇಡೀ ಕಾಲದಲ್ಲಿ, ದೇವಾಲಯದ ನಿರ್ಮಾಣದ ಚಟುವಟಿಕೆಯು ಸಾಕಷ್ಟು ಪ್ರಮಾಣದಲ್ಲಿ ಮುಂದುವರೆಯುತ್ತಲೇ ಹೋಯಿತು. ಈ ಕಾಲದ ದೇವಾಲಯಗಳನ್ನು ಗಾತ್ರ, ಸ್ವರೂಪ ಮತ್ತು ರಚನೆಗಳಿಗನುಸಾರವಾಗಿ ಅನೇಕ ಗುಂಪುಗಳಾಗಿ ವರ್ಗೀಕರಿಸಬಹುದು.

ಹೊಯ್ಸಳ ದೇವಾಲಯಗಳ ವಾಸ್ತುಶಿಲ್ಪವು ಬಹುಮಟ್ಟಿಗೆ ಮೈಸೂರು ಪ್ರಾಂತ್ಯದಲ್ಲಿ ಪ್ರಾರಂಭವಾಯಿತು. ಕಾರಣ. ಆ ಪ್ರದೇಶದ ಬಂಡೆಗಳಲ್ಲಿ ಸಾಮಾನ್ಯವಾಗಿ ಕಂಡು ಬರುತ್ತಿದ್ದ ನಯವಾದ ಬಳಪದ ಕಲ್ಲು. ಅದು ಕೆಲಸ ಮಾಡಲು ಸುಲಭವಾದ ಹಾಗೆಯೇ ಬಾಳಿಕೆ ಬರುವ ಮತ್ತು ಸಾಕಷ್ಟು ದೊಡ್ಡ ಗಾತ್ರದಲ್ಲಿ

ಭೂಮಿಯಿಂದ ತೆಗೆಯಬಹುದಾದ ನುಣುಪಾದ ಶಿಲೆ. ಪ್ರಖ್ಯಾತವಾದ ಹೊಯ್ಸಳ ವಾಸ್ತುಶಿಲ್ಪ ಶೈಲಿಯ ಅಲಂಕಾರಿಕ ಕೆತ್ತನೆಯ ಕಲೆಯನ್ನು ಈ ಕಲ್ಲಿನ ಬಳಕೆ ಸುಗಮಗೊಳಿಸಿತು.

ಕೆತ್ತಲ್ಪಟ್ಟ ದ್ವಾರಗಳು, ಸಾಣೆ ಹಿಡಿದ ಸ್ತಂಭಗಳು, ಮತ್ತು ಪಾರದರ್ಶಕ ಕಿಟಕಿಯ ತೆರೆಗಳು ಈ ಅಂಶಗಳೊಂದಿಗೆ ಹೊಯ್ಸಳ ಕಲಾವಿದರು, ನಕ್ಷತ್ರಾಕಾರದ ತಳಹದಿ, ದೇವಾಲಯಕ್ಕೆ ಬೆಳಕು ನೆರಳಿನಾಟ ಕೊಡುವ ಅಂಕುಡೊಂಕಾದ ಗೋಡೆ ಮತ್ತು ಜಗಲಿ, ಮೊದಲಾದ ತಮ್ಮದೇ ಆದ ವಾಸ್ತುಶಿಲ್ಪದ ಅಂಶಗಳನ್ನು ಸೇರಿಸಿದರು. ಈ ನವೀನತೆಗಳೊಂದಿಗೆ ಹೊಯ್ಸಳರು ಸ್ವತಂತ್ರ ಕಲೆ ಮತ್ತು ವಾಸ್ತುಶಿಲ್ಪದ ಛಾಪನ್ನು ಸ್ಥಾಪಿಸಿದರು.

ಹೊಯ್ಸಳ ವಾಸ್ತು ಶಿಲ್ಪಿಗಳು ಬಳಸಿದ ಶಿಲೆಯ ಅತಿ ಶೂಕ್ಷ್ಮ ಉಳಿಯ ಕೆಲಸಕ್ಕೆ ಮತ್ತು ಬಡಗಿಯ ಉಪಕರಣಗಳಿಗೆ ಸಾಕಷ್ಟು ರೀತಿಯ ಉಪಯುಕ್ತವಾದುದು ಶೃಂಗಾರದ ಸಿದ್ಧತೆಯು ಸಾಮಾನ್ಯವಾಗಿ ಮೂರು ಹಂತಗಳಲ್ಲಿ ಕಂಡುಬರುತ್ತಿತ್ತು. ಮೊದಲನೆಯದಾಗಿ ಕೆತ್ತಬೇಕಾದ ಶಿಲ್ಪದ ಅಂದಾಜಿನ ರೂಪರೇಖೆ, ಎರಡನೆಯ ಹಂತದಲ್ಲಿ ಮುಖ, ಶರೀರ ಮತ್ತು ಆಭರಣಗಳ ಶೃಂಗಾರದ ವಿವರಗಳ ಕೆತ್ತನೆ, ಮತ್ತು ಕೊನೆಯದಾಗಿ, ಅದಕ್ಕೆ ಮೆರಗುನಿಡಿ ಪೂರ್ಣಗೊಳಿಸುತ್ತಿದ್ದ ರೀತಿ. ಇದು ಹೊಯ್ಸಳ ಶೈಲಿಯ ಮುಖ್ಯ ಲಕ್ಷಣಗಳಲ್ಲಿ ಒಂದಾಗಿತ್ತು.

ದೇವಾಲಯದ ಹೊರಗೋಡೆಗಳ ಕೆಳಾರ್ಧವು ಅನೇಕ ಶ್ರೇಣಿಗಳಲ್ಲಿ ಅಡ್ಡರೇಖೆಯ ಸಾಲುಗಳಾಗಿ ಒಂದರ ಮೇಲೆ ಇನ್ನೊಂದು ನಿರಂತರ ನಿರೂಪಣೆಯ ಸಾಲುಗಳು ಕಾಣಿಸಿಕೊಳ್ಳುವಂತೆ ವಿಭಜಿಸಲಾಯಿತು. ಶಿಸ್ತುಬದ್ಧವಾದ ಸಮಾನಾಂತರ ಶೈಲಿಯು ಬಹು ಚೆನ್ನಾಗಿ ಅಗಣಿತ ಸಂದೇಶಗಳನ್ನೂ, ವಿವಿಧ ವಿಷಯಗಳನ್ನು, ಮತ್ತು ನವೀನ ಸಂಯೋಜನೆಗಳನ್ನೂ ಪರಿಚಯಿಸುತ್ತವೆ. ಅಲಂಕಾರಿಕ ಈ ಶ್ರೇಣಿಗಳು ರಾಮಾಯಣ, ಮಹಾಭಾರತ, ಮತ್ತು ಭಾಗವತ ಮೊದಲಾದ ಪೌರಾಣಿಕ ಸಾಹಿತ್ಯದಿಂದ ಆಯ್ದ ದೃಶ್ಯಗಳನ್ನು ಬಿಂಬಿಸುತ್ತವೆ. ಮತ್ತೆ ಕೆಲವು ಪಂಚತಂತ್ರ ಮೊದಲಾದವುಗಳಿಂದ ದೃಶ್ಯಗಳನ್ನು ತೋರುತ್ತವೆ. ಮತ್ತಿತರ ಸಾಲುಗಳಲ್ಲಿ ಆನೆಗಳು, ಅಶ್ವಗಳು, ಹಾಡುವ ಮತ್ತು ವಾದ್ಯ ನುಡಿಸುವ ಸ್ತ್ರೀ ಮತ್ತು ಪುರುಷರು, ಹೂಗಳು ಮತ್ತು ಬಳ್ಳಿಗಳು ಮತ್ತು ಅನೇಕ ವಿವಿಧ ಪಕ್ಷಿಗಳು ಮತ್ತು ಪ್ರಾಣಿಗಳ ಕೆತ್ತನೆಗಳು ಕಂಡುಬರುತ್ತವೆ.

**136.** ________ ಕಾರಣ, ಹೊಯ್ಸಳರ ಕಾಲದ ಶಿಲ್ಪಿಗಳು ಜಗತ್ತಿನಲ್ಲಿಯೇ ಉತ್ಕೃಷ್ಟತೆಯನ್ನು ಸಾಧಿಸಿದ ಅಪೂರ್ವ ಪ್ರತಿಭೆಗಳಾದರು.

(1) ಚಾಲುಕ್ಯರ ಸಂಪ್ರದಾಯ ಅನುಸರಣೆ
(2) ಗಾತ್ರ, ರಚನೆ ಮತ್ತು ಸ್ವರೂಪ
(3) ಶೃಂಗಾರ, ಸೊಬಗು, ಶಿಲ್ಪಕೆತ್ತನೆ
(4) ರಮ್ಯತೆ, ಕುಶಲತೆ, ವಿವರಗಳ ಅತಿಸೂಕ್ಷ್ಮತೆ

**137.** ಹೊಯ್ಸಳರ ದೇವಾಲಯಗಳಲ್ಲಿ ಬಳಸಿದ ಕಲ್ಲು

(1) ಬಣ್ಣ ಬಣ್ಣದ ಕಲ್ಲು
(2) ಗ್ರಾನೈಟ್ ಕಲ್ಲು
(3) ನಯವಾದ ಬಳಪದ ಕಲ್ಲು
(4) ಬೆಣಚು ಕಲ್ಲು

**138.** ಕೆತ್ತಬೇಕಾದ ಶಿಲ್ಪದ ಅಂದಾಜಿನ ರೂಪರೇಖೆ, ಮುಖ್ಯ ಶರೀರ ಆಭರಣಗಳ ಶೃಂಗಾರದ ವಿವರವಾದ ಕೆತ್ತನೆ ಪೂರ್ಣಗೊಳಿಸುತ್ತಿದ್ದ ರೀತಿ ಇವೆಲ್ಲವೂ ಹೊಯ್ಸಳ ಶೈಲಿಯ

(1) ಅಪೂರ್ವ ಪ್ರತಿಭೆ
(2) ಮುಖ್ಯ ಲಕ್ಷಣಗಳಲ್ಲಿ ಒಂದು
(3) ಸಾಮಾನ್ಯ ಲಕ್ಷಣಗಳು
(4) ಇರಲೇಬೇಕಾದ ನಿಯಮಗಳು

**139.** ಹೊಯ್ಸಳರ ಶಿಲ್ಪಗಳು ಬಿಂಬಿಸುವ ಪೌರಾಣಿಕ ಸಾಹಿತ್ಯದ ಅಂಶಗಳು ಯಾವುವು ?

(1) ಹೂಗಳು ಬಳ್ಳಿಗಳು
(2) ರಾಮಾಯಣ, ಮಹಾಭಾರತ, ಭಾಗವತ
(3) ಪಂಚತಂತ್ರ
(4) ಆನೆಗಳು, ಅಶ್ವಗಳು

**140.** ದೇವಾಲಯದ ಹೊರಗೋಡೆಗಳ ಕೆಳಾರ್ಧವು ಈ ರೀತಿ ತೋರಿಸಲಾಗಿದೆ

(1) ಆನೆಗಳು, ಅಶ್ವಗಳು, ಪಂಚತಂತ್ರ, ಪೌರಾಣಿಕ ಕತೆಗಳು ಇತ್ಯಾದಿ
(2) ಶಿಸ್ತುಬದ್ಧವಾದ ಶೈಲಿ
(3) ಕಿಟಕಿಗಳು, ಸ್ತಂಭಗಳು
(4) ನಕ್ಷತ್ರಾಕಾರದ ತಳಹದಿ

**141.** ಸವರ್ಣದೀರ್ಘ ಸಂಧಿಗೆ ಉದಾಹರಣೆ

(1) ಸಂಪ್ರದಾಯ
(2) ನಕ್ಷತ್ರಾಕಾರದ
(3) ಮಹಾಭಾರತ
(4) ಗುಂಪುಗಳಾಗಿ

**142.** ಪ್ರಾಣಿಗಳ ಪಾತ್ರಗಳನ್ನು ಬಳಸಿಕೊಂಡು ಐದು ತಂತ್ರೋಪಾಯಗಳನ್ನು ಕತೆಗಳ ಮೂಲಕ ತಿಳಿಸುವುದು
(1) ಹೊಯ್ಸಳರ ಶಿಲ್ಪ
(2) ಮಹಾಭಾರತ
(3) ರಾಮಾಯಣ
(4) ಪಂಚತಂತ್ರ

**143.** 'ಪಾರದರ್ಶಕ' ಎಂದರೆ
(1) ನೋಟ - ಮುನ್ನೋಟ
(2) ವಸ್ತುವಿನ ಮೂಲಕ ಏನೂ ಕಾಣಿಸದೇ ಇರುವುದು
(3) ವಸ್ತುವಿನ ಮೂಲಕ ನೋಡಲು ಸಾಧ್ಯವಾಗುವುದು
(4) ಪರಲೋಕ ದರ್ಶನ

**144.** 'ಶೃಂಗಾರ' - ಶಬ್ದದ ತದ್ಭವರೂಪ
(1) ಶಂಕರ
(2) ಮೇಲಿನವು ಯಾವುದೂ ಅಲ್ಲ
(3) ಶೃಂಗರ
(4) ಸಿಂಗಾರ

*ನಿರ್ದೇಶನಗಳು : ಕೆಳಗೆ ಕೊಟ್ಟಿರುವ ವಾಕ್ಯ ವೃಂದವನ್ನು ಓದಿ ಮುಂದೆ ಕೊಟ್ಟಿರುವ ಪ್ರಶ್ನೆಗಳಿಗೆ (ಪ್ರ.ಸಂ. 145 ರಿಂದ 150) ಅತ್ಯಂತ ಸೂಕ್ತವಾದವುಗಳನ್ನು ಆರಿಸಿ ಉತ್ತರಿಸಿ.*

ನನಗೆ ಕಾಲ ಕಳೆಯುವುದು ಹೇಗೆಂಬ ಚಿಂತೆಗಿಂತ ಕಾಲ ಕಳೆದುಹೋಗುತ್ತದಲ್ಲಾ ಎನ್ನುವುದೇ ಚಿಂತೆ ! ನಾನು ನಮ್ಮ ತೋಟದ ಬೇಲಿಯ ಬಲಕ್ಕೆ ಇದ್ದ ಒಂದು ಹಳೇ ಕೆರೆಯ ಹತ್ತಿರ ಹೊರಟಿದ್ದೆ. ಮಧ್ಯದಲ್ಲಿ ಮರಕುಟುಕನ ಹಕ್ಕಿ ನಗಾರಿ ಹೊಡೆದಂತೆ ಒಣಗಿದ ಮರದ ಕೊಂಬೆಗೆ ಡಮ ಡಮ ಡಮ ಬಡಿದಿದ್ದು ಕೇಳಿಸಿತು. ಆದನ್ನು ಕೂಂಚ ಹೊತ್ತು ನೋಡಲು ನಾನು ನನ್ನ ನಿಶ್ಚಿತ ಕಾರ್ಯಕ್ರಮ ಸ್ವಲ್ಪ ಬದಲಿಸಬೇಕಾಯ್ತು. ಆ ಮರಕುಟುಕನ ಹಕ್ಕಿ ಎಷ್ಟು ಬೇಗವಾಗಿ ಮರವನ್ನು ಕುಟ್ಟುತ್ತಿತ್ತೆಂದರೆ ಕುಟುಕತೊಡಗಿದರೆ ಅದರ ತಲೆ. ಕುತ್ತಿಗೆಗಳು ಕಣ್ಣಿಗೆ ಕಾಣುತ್ತಲೇ ಇರಲಿಲ್ಲ. ತಲೆಯನ್ನೇ ಸುತ್ತಿಗೆ ರೀತಿ ಅದು ಮರಕ್ಕೆ ಬಡಿಯಲು ಉಪಯೋಗಿಸುವುದನ್ನು ನೋಡಿ ನನಗೆ ಗಾಬರಿಯಾಯ್ತು. ಮೊನ್ನೆ ಬಾಗಿಲು ದಾಟುವಾಗ ಹೊಗಲು ನನ್ನ ಹಣೆಗೆ ಮೆಲ್ಲಗೆ ತಾಗಿದ್ದಕ್ಕೇ ತಲೆ ಸುತ್ತಿಬಂದು ಕಾಲುಗಂಟೆ ಕುಳಿತು ಸಾಧಾರಿಸಿಕೊಂಡಿದ್ದೆ. ಮರಕುಟುಕನ ಹಕ್ಕಿ ಬಡಬಡ ಮರಕ್ಕೆ ತಲೆ ಚಚ್ಚುವುದನ್ನು ನೋಡಿ ನನಗೆ ತಲೆಸುತ್ತಿಬಂದಂತಾಯ್ತು. ಆ ಹಕ್ಕಿ ತಲೆಯೊಳಗಿರುವ ಮೆದುಳಿನ ಕತೆ ಏನು ? ಅಲ್ಲಿ ರಕ್ತಸ್ರಾವ ಆಗಿ ಅದು ಸಾಯದೆ ಉಳಿದಿರುವುದು ಹೇಗೆ ? ಆದಿರಲಿ, ಈ ಹಕ್ಕಿ ಮರದೊಳಗಿರುವ ಹುಳುಗಳು ಇಂಥ ಕಡೆಯೇ ಇದೆ ಎಂದು ಹೇಗೆ ಪತ್ತೆಮಾಡಿ ತೂತು ಹೊಡೆಯುತ್ತದೆ ? ಇವನ್ನೆಲ್ಲಾ ಯೋಚಿಸಿದಷ್ಟೂ ನನ್ನ ಸುತ್ತಮುತ್ತಲ ಪರಿಸರ ರಹಸ್ಯಮಯವಾಗುತ್ತದೆ. ಪುಕವೋಕಾ ಹೇಳಿದ ಹಾಗೆ ಇದನ್ನೆಲ್ಲಾ ಸಂಪೂರ್ಣ ತಿಳಿಯುತ್ತೇನೆಂದು ಹೋಗುವುದು ಮೂರ್ಖತನವೇ ಸರಿ. ಸುಮ್ಮನೆ ನಮಗೆ ಅಗತ್ಯ ಇದ್ದಷ್ಟನ್ನು ಮಾತ್ರ ತಿಳಿದುಕೊಂಡು ಮಿಕ್ಕದ್ದಷ್ಟು ನೋಡಿ ಅಚ್ಚರಿಪಡುತ್ತ ಇದ್ದು ಬಿಡುವುದು ಒಳ್ಳೆಯದು. ಮರ ಕುಟುಕನ ಹಕ್ಕಿ ತಲೆಯೊಳಗೆ ಏನೇನು ಉಪಕರಣಗಳಿವೆಯೋ, ಹೇಗೆ ರಚನೆಯಾಗಿದೆಯೋ ಯಾರಿಗೆ ಗೊತ್ತು.

ನನಗೆ ಪುರಸೊತ್ತು ಸಿಕ್ಕಾಗಲೆಲ್ಲಾ ಅಲ್ಲೆ ನೆರಳಿನಲ್ಲಿ ಬಿದ್ದಿದ್ದ ನೇರಿಲು ಮರದ ಮೇಲೆ ಕುಳಿತು ಸುಮ್ಮನೆ ಕೆರೆ ದಡದಲ್ಲಿ ನಡೆಯುವ ನೂರಾರು ಚಟುವಟಿಕೆಗಳನ್ನು ವೀಕ್ಷಿಸುತ್ತಿದ್ದೆ. ಅಲ್ಲಿಗೆ ಹೋದಕೂಡಲೇ ಕಿವಿ ಮಾಡುತ್ತಿದ್ದ ಮೊದಲ ಕೆಲಸ ಎಂದರೆ ದಡದಲ್ಲಿ ಕುಳಿತಿದ್ದ ಕೊಕ್ಕರೆಗಳನ್ನು ಅಟ್ಟಿಸಿಕೊಂಡು ಹೋಗುವುದು. ಕಿವಿಯ ಈ ಚೇಷ್ಟೆಯನ್ನು ತುಂಬ ದಿನದಿಂದ ನೋಡಿ ನೋಡಿ ಅಭ್ಯಾಸವಾಗಿದ್ದ ಕೊಕ್ಕರೆಗಳು ಗಾಬರಿಯಾಗದೆ ಹಾರಿ ಎದುರಿನ ದಡಕ್ಕೆ ಹೋಗಿ ಕೂರುತ್ತಿದ್ದವು.

ಯೋಚಿಸಿದರೆ ಈ ಕೊಕ್ಕರೆಗಳು ನೀರಿನಲ್ಲಿ ಮೀನುಗಳನ್ನು ಹೇಗೆ ಹಿಡಿಯುತ್ತವೆ ಎಂದು ಆಶ್ಚರ್ಯ ಆಗುತ್ತೆ ! ಏಕೆಂದರೆ ಎರಡು ಕೈ ಹತ್ತು ಬೆರಳುಗಳಿರುವ ನಮಗೆ ಮೀನುಗಳನ್ನು ನೀರಿನಲ್ಲಿ ಹಿಡಿಯಲುಸಾಧ್ಯವೇ ಇಲ್ಲ. ಆಷ್ಟೊಂದು ನುಣುಪಾದ, ಮುಟ್ಟಿದರೆ ಜಾರಿ ನುಸುಳುವ ಈ ಮೀನುಗಳನ್ನು ಹಿಡಿಯಲು ಕೊಕ್ಕರೆಗೆ ಇರುವ ಆಯುಧ ಸಾಧನಗಳಾದರೂ ಏನು ? ಯೊಚಿಸಿ. ಕೇವಲ ಚಿಮ್ಮಟದಂತಿರುವ ಒಂದು ಕೊಕ್ಕು ಅಷ್ಟೇ. ನಾವು ಒಂದಲ್ಲ ಹತ್ತು ಚಿಮ್ಮಟಗಳನ್ನು ತಗೊಂಡು ನಮ್ಮ ಜೀವನಮಾನವೆಲ್ಲಾ ಪ್ರಯತ್ನಿಸಿದರೂ ಒಂದು ಮೀನನ್ನೂ ಹಿಡಿಯಲಾಗುವುದಿಲ್ಲ. ಜೀವವಿರುವ ಮೀನುಗಳನ್ನು ಕೆರೆಯಲ್ಲಿ ಹಿಡಿಯುವುದಿರಲಿ, ಸತ್ತ ಮೀನುಗಳನ್ನು ಸಹ ಚಿಮ್ಮಟದಿಂದ ಹಿಡಿಯಲು ಸಾಧ್ಯವಿಲ್ಲ. ಈ ಕೊಕ್ಕರೆಗಳಾದರೋ ಒಂಟಿಗಾಲಲ್ಲಿ

ನಿಂತುಕೊಂಡು ನಿದ್ದೆ ನಟಿಸುತ್ತ ಹತ್ತಿರ ಬಂದ ಮೀನುಗಳನ್ನು ಚಕ್ಕನೆ ಕೊಕ್ಕಿನಲ್ಲಿ ಹಿಡಿದು ಅವು ಕೊಕ್ಕಿನ ತುದಿಯಲ್ಲಿ ಮಿಡುಕಾಡುತ್ತಿರಬೇಕಾದರೆ ನನ್ನ ಕಣ್ಣೆದುರೇ ಮಾತ್ರೆ ನುಂಗಿದಂತೆ ಗುಳಕ್ಕನೆ ನುಂಗಿಬಿಡುತ್ತಿದ್ದವು.

**145.** ಲೇಖಕರ ಬಿಡುವಿನ ಹವ್ಯಾಸವೆಂದರೆ

(1) ಕಾಲಕಳೆಯುವುದು ಹೇಗೆ - ಎಂಬ ಚಿಂತೆ

(2) ಪಕ್ಷಿ ನೋಡುವುದು

(3) ಪ್ರಕೃತಿಯ ಮಡಿಲಲ್ಲಿ ಕಾಲಕಳೆಯುವುದು

(4) ಕಾಲಕಳೆದು ಹೋಗುತ್ತದೆ ಎಂಬ ಚಿಂತೆ

**146.** ಬಹುವೇಗವಾಗಿ ತಲೆ-ಕುತ್ತಿಗೆ ಏನೂ ಸರಿಯಾಗಿ ಕಾಣದಂತೆ ಮರ ಕುಟ್ಟುವ ಹಕ್ಕಿ

(1) ಕಿವಿ

(2) ಮರಕುಟುಕನ ಹಕ್ಕಿ

(3) ಗುಬ್ಬಚ್ಚಿ

(4) ಕೊಕ್ಕರೆ

**147.** ಕಿವಿಯ ಚೇಷ್ಟೆಗೆ, ಕೊಕ್ಕರೆಗಳ ಪ್ರತಿಕ್ರಿಯೆ

(1) ಗಾಭರಿ ಏನೂ ಇಲ್ಲದೇ, ಸಹಜವಾಗಿ ಹಾರಿಯೋಗುತ್ತಿದ್ದವು

(2) ಇದ್ದಲ್ಲಿಯೇ ಇರುತ್ತಿದ್ದವು

(3) ಗಾಭರಿ

(4) ಹಾರಿ ಹೋಗುವುದು

**148.** ಲೇಖಕರು ಪ್ರಶಂಸೆ ಮಾಡುವ ಕೊಕ್ಕರೆಯ ಒಂದು ವಿಶಿಷ್ಟ ಕೌಶಲ

(1) ಒಂಟಿಕಾಲಲ್ಲಿ ನಿಂತು ನಿದ್ದೆ ನಟಿಸುವುದು

(2) ಜೀವವಿರುವ ಚುರುಕಾದ ಮೀನುಗಳನ್ನು ಪಟ್ಟನೆ ಹಿಡಿಯುವುದು

(3) ಸಹಜವಾಗಿ, ಗಾಭರಿಯಾಗದೇ ಹಾರಿ ಹೋಗುವುದು

(4) ಕಿವಿಗೆ ಚೇಷ್ಟೆ ಮಾಡಲು ಅವಕಾಶ ಕೊಡುವುದು

**149.** ಲೇಖಕರು ಹೊರಗೆ ಅಡ್ಡಾಡಲು ಹೋಗುತ್ತಿದ್ದುದು

(1) ಬೇಸರ ನೀಗಿಸಲು

(2) ನೇರಲೇ ಮರದ ಮೇಲೆ ಸುಮ್ಮನೆ ಕುಳಿತುಕೊಳ್ಳಲು

(3) 'ಕಿವಿ' ಯನ್ನು ಓಡಿಯಾಡಿಸಲು

(4) ಪ್ರಕೃತಿಯಲ್ಲಿ - ನಡೆಯುವ ನಾನಾ ತರಹೆಯ ಚಟುವಟಿಕೆಗಳನ್ನು ಗಮನಿಸಿ ಅಭ್ಯಾಸಮಾಡಲು

**150.** ನಮಗೆ ಹತ್ತು ಬೆರಳುಗಳಿವೆ, ಕೊಕ್ಕೆರೆಗೆ ಒಂದು ಕೊಕ್ಕು ಮಾತ್ರ. ಆದರೂ ಮೀನು ಹಿಡಿಯಲು ಯಾರಿಗೆ ಸಾಧ್ಯ ?

(1) ಕೌಶಲವಿರುವ ಕೊಕ್ಕರೆಗೆ

(2) ಮೇಲಿನ ಯಾವುದೂ ಸರಿಯಿಲ್ಲ

(3) ಇಬ್ಬರಿಗೂ ಸಾಧ್ಯವಿಲ್ಲ

(4) ಮನುಷ್ಯನ ಬೆರಳುಗಳಿಗೆ

## SPACE FOR ROUGH WORK

SPACE FOR ROUGH WORK

# SPACE FOR ROUGH WORK

*ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :*

1. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. OMR ಉತ್ತರ ಪತ್ರಿಕೆಯ ಪುಟ-2 ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ/ಕಪ್ಪು ಬಾಲ್ ಪಾಯಿಂಟ್ ಪೆನ್ ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
2. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
3. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆ ಯಾಗಿರುವ ಸ್ಥಿತಿಯನ್ನು ಹೊರತು ಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
4. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
5. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯ ಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
6. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ನ್ನು ನಿರೀಕ್ಷಕರಿಗೆ ತೋರಿಸಬೇಕು.
7. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
8. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರೀ ಪತ್ರದಲ್ಲಿ ಎರಡುಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂಧು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.
9. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.
10. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
11. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
12. ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. *ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.*

SEAL

**READ CAREFULLY THE FOLLOWING INSTRUCTIONS :**

1. Out of the four alternatives for each question, only one circle for the correct answer is to be darkened completely with Blue/Black Ball Point Pen on Side-2 of the OMR Answer Sheet. The answer once marked is not liable to be changed.
2. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
3. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
4. The candidates will write the correct Test Booklet Code and Number as given in the Test Booklet / Answer Sheet in the Attendance Sheet.
5. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
6. Each candidate must show on demand his / her Admission Card to the Invigilator.
7. No candidate, without special permission of the Superintendent or Invigilator, should leave his / her seat.
8. The candidates should not leave the Examination Hall without handing over their Answer Sheet to the Invigilator on duty and sign the Attendance Sheet twice. Cases where a candidate has not signed the Attendance Sheet a second time will be deemed not to have handed over the Answer Sheet and dealt with as an unfair means case.
9. Use of Electronic / Manual Calculator is prohibited.
10. The candidates are governed by all Rules and Regulations of the Board with regard to their conduct in the Examination Hall. All cases of unfair means will be dealt with as per Rules and Regulations of the Board.
11. No part of the Test Booklet and Answer Sheet shall be detached under any circumstances.
12. **On completion of the test, the candidate must hand over the Answer Sheet to the Invigilator in the Room / Hall.** ***The candidates are allowed to take away this Test Booklet with them.***

**निम्नलिखित निर्देश ध्यान से पढ़ें :**

1. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के पृष्ठ-2 पर केवल एक वृत्त को ही पूरी तरह नीले/काले बॉल पॉइन्ट पेन से भरें । एक बार उत्तर अंकित करने के बाद उसे बदला नहीं जा सकता है ।
2. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ । परीक्षार्थी अपना अनुक्रमांक उत्तर पत्र में निर्धारित स्थान के अतिरिक्त अन्यत्र न लिखें ।
3. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी ।
4. परीक्षा पुस्तिका / उत्तर पत्र में दिए गए परीक्षा पुस्तिका संकेत व संख्या को परीक्षार्थी सही तरीके से हाज़िरी-पत्र में लिखें ।
5. परीक्षार्थी द्वारा परीक्षा हॉल/कक्ष में प्रवेश कार्ड के सिवाय किसी प्रकार की पाठ्य सामग्री, मुद्रित या हस्तलिखित, काग़ज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है ।
6. पूछे जाने पर प्रत्येक परीक्षार्थी, निरीक्षक को अपना प्रवेश-कार्ड दिखाएँ ।
7. अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें ।
8. कार्यरत निरीक्षक को अपना उत्तर पत्र दिए बिना एवं हाज़िरी-पत्र पर दुबारा हस्ताक्षर किए बिना परीक्षार्थी परीक्षा हॉल नहीं छोड़ेंगे । यदि किसी परीक्षार्थी ने दूसरी बार हाज़िरी-पत्र पर हस्ताक्षर नहीं किए तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा ।
9. इलेक्ट्रॉनिक / हस्तचालित परिकलक का उपयोग वर्जित है ।
10. परीक्षा-हॉल में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं । अनुचित साधनों के सभी मामलों का फैसला बोर्ड के नियमों एवं विनियमों के अनुसार होगा ।
11. किसी हालत में परीक्षा पुस्तिका और उत्तर पत्र का कोई भाग अलग न करें ।
12. **परीक्षा सम्पन्न होने पर, परीक्षार्थी कक्ष / हॉल छोड़ने से पूर्व उत्तर पत्र कक्ष-निरीक्षक को अवश्य सौंप दें ।** ***परीक्षार्थी अपने साथ इस परीक्षा पुस्तिका को ले जा सकते हैं ।***